ಉಪಾಧ್ಯಕ್ಷರು: ಆಗಲಿ. ಕೊಡಲಿ.

ಸಚಿವರ ಹೇಳಿಕೆ.

ವಿಷಯ: ದೂದ್‌ಗಂಗಾ ನದಿಯಿಂದ ವೇದಗಂಗಾ ನದಿಗೆ ನೀರು ಬಿಡುವ ಬಗ್ಗೆ.

+ ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು): ದೂದ್‌ಗಂಗಾ ರಿವರ್‌ನಿಂದ ವೇದಗಂಗಾ ರಿವರ್‌ಗೆ ನೀರು ಬಿಡುವ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ನಮ್ಮ ಮುಖ್ಯಮಂತ್ರಿಗಳು ಕಾಗದ ಬರೆದ ಬಗ್ಗೆ ಫ್ಯಾಕ್ಸ್ ಇಲ್ಲಿ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ತಮಗೆ ಹೇಳಿದ್ದೆ ನಾನು ಫ್ಯಾಕ್ಸ್ ಕಳುಹಿಸಿ ಅದರ ಪ್ರತಿಯನ್ನು ಇಲ್ಲಿ ಕೊಡುತ್ತೇನೆ ಎಂದು. ಮತ್ತೆ ತುಂಗಭದ್ರ ಎಡದಂಡೆ ನಾಲೆಯ ಬಗ್ಗೆ ಬೆಳಗ್ಗೆ ಎಲ್ಲಾ ಹೇಳಿದ್ದೆ. ಕೇವಲ ಒಂದು ಕಾಗದವನ್ನು ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ಫ್ಯಾಕ್ಸ್ ಇವತ್ತೇ ಮಾಡಬೇಕು ಎಂದು ಹೇಳಿದ್ದರು. ಆ ಫ್ಯಾಕ್ಸ್ ಕಾಪಿಯನ್ನು ಉಪಸಭಾಪತಿಯವರಿಗೆ ಕೊಡುತ್ತೇನೆ ಎಂದು ಹೇಳಿದ್ದೆ. ಅದನ್ನು ಕೊಟ್ಟಿದ್ದೇನೆ.

Distributory No.85 which takes off from the Main canal falls under the jurisdiction of Sirawal Irrigation Division in Manvi Taluk. In the case of other distributories, the distributory at No. 85 also has got two segments, in the upper and lower end. The two segments received water in rotation of a week each. The upper end farmers of this distributory received their quota of water and their rotation ends on 9-3-98. From 9-3-98 the lower end farmers were to get water. In fact, these farmers particularly from Manvi and surrounding villages have staged dharna and blocked the road traffic on morning 9-3-98 demanding their full share of water. They have called off their dharna only on an assurance by the Deputy Commissioner, Supperintendent of Police in the afternoon 9-3-98. They ensured that the all lower end of Irrigation officials and Police has been brought into effect round the clock, along with the main canal of the district. In respect of distributory 85, all the upper end pipes were closed on 9-3-98. Following closure, the irrigation officials...

(INTERRUPTIONS)

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಮಂತ್ರಿಗಳೇ ಒಂದು ನಿಮಿಷ. ಬಹಳ ನೋವು ಉಂಟು ಮಾಡುವ ವಿಚಾರ ಏನು ಎಂದು ಹೇಳಿದರೆ ಎಲ್ಲಾ ಕಡತಗಳು ಆಗಲಿ, ಪತ್ರವ್ಯವಹಾರವಾಗಲೀ ಎಲ್ಲಾ ಕನ್ನಡ ಭಾಷೆಯಲ್ಲೇ ಆಗಬೇಕು ಎಂದು ವಾದ ಮಾಡುವಂಥ ನಾವು ಕನ್ನಡಿಗರು, ಮಂತ್ರಿಗಳು, ಕನ್ನಡ ಕಾವಲು ಸಮಿತಿ ಅಧ್ಯಕ್ಷರು ಎಲ್ಲಾ ಕಛೇರಿಗಳಿಗೆ ಭೇಟಿ ಕೊಟ್ಟು ಕನ್ನಡದಲ್ಲಿ ಅರ್ಜಿ ಬರದಿದ್ದರೆ ಹರಿದುಹಾಕಿ ಎಂದು ಹೇಳುತ್ತಾರೆ. ಎಲ್ಲಾ ಕಛೇರಿಯಲ್ಲೂ ಸಹ ಇದರ ವಿಚಾರವಾಗಿ ಮಾತುಕತೆ ನಡೆಸುತ್ತಾರೆ. ಆದರೆ ನಮ್ಮ ಸರ್ಕಾರದಲ್ಲೇ ಇವರು ಆಂಗ್ಲಭಾಷೆಯಲ್ಲಿ ವರದಿ ಒಪ್ಪಿಸುವುದಾದರೆ ನಾವು ಏನು ಹೇಳೋಣ ಉಪಾಧ್ಯಕ್ಷರೆ?

ಶ್ರೀ ಕೆ.ಎನ್.ನಾಗೇಗೌಡ: ಕನ್ನಡದ ಬಗ್ಗೆ ನಮ್ಮ ಸಗೀರ್ ಅವರಿಗೆ ಇಷ್ಟು ಆಸಕ್ತಿ ಬಂದಿರುವುದಕ್ಕೆ ನಾವೆಲ್ಲ....

ಶ್ರೀ ಸಿ.ಆರ್.ಸಗೀರ್ ಅಹಮದ್: ಆಸಕ್ತಿ ಬಗ್ಗೆ ಪ್ರಶ್ನೆ ಅಲ್ಲ. ನನಗೆ ಹೆಚ್ಚುಕಡಿಮೆ 25 ವರ್ಷದಿಂದ ಆಸಕ್ತಿ ಇದೆ.

ಶ್ರೀ ಕೆ.ಎನ್.ನಾಗೇಗೌಡ: ಜೀರೋ ಹವರ್‌ನಲ್ಲಿ ಒಂದ ಪ್ರಶ್ನೆ ಎತ್ತಿದ್ದಾರೆ. ಡೆಪ್ಯುಟಿಕಮಿಷನರ್ ಅವರಿಂದ ರಿಪೋರ್ಟ್ ತರಿಸಿದ್ದೇನೆ. ಒಂದೇ ಕಾಪಿ ನನಗೆ ಇರತಕ್ಕದ್ದು.

ಶ್ರೀ ಸಿ.ಆರ್.ಸಗೀರ್ ಅಹಮದ್: ನೀವೇನು ಈ ಬಿ.ಜೆ.ಪಿ.ಯವರು ಹೇಳುತ್ತಾರಲ್ಲಾ ಹಾಗೆ ಹೇಳಿದ ಹಾಗಾಯಿತಲ್ಲಾ ನಾಗೇಗೌಡರೇ. ★

ಉಪಾಧ್ಯಕ್ಷರು: ಸಗೀರ್ ಅಹಮದ್ ಅವರೇ, ಅವರು ಹೇಳಲಿ. ಟೈಮ್ ಹೋಗುತ್ತದೆ.

ಶ್ರೀ ಸುರೇಶ್ ಕುಮಾರ್: ಡೆಪ್ಯುಟಿ ಕಮಿಷನರ್ ಕನ್ನಡಧಲ್ಲಿ ಕಳುಹಿಸುವುದಿಲ್ಲವೇ?

ಶ್ರೀ ಬಿ.ಬಿ.ಶಿವಪ್ಪ: ಉಪಾಧ್ಯಕ್ಷರೆ, ಸಗೀರ್ ಅಹಮದ್ ಅವರು ಒಂದು ಮಾತು ಹೇಳಿದ್ದಾರೆ. ಅದು ಕಡತಕ್ಕೆ ಹೋಗಿದ್ದರೆ ಅದನ್ನು ತೆಗೆಯಬೇಕಾಗುತ್ತದೆ. ★ ನಾವು ಹೇಳುತ್ತಿರುವುದು ಭಾರತ ದೇಶದಲ್ಲಿರತಕ್ಕವರೆಲ್ಲಾ ಭಾರತೀಯರು ಎಂದು. ಇವರಲ್ಲ ಎಂದು ಹೇಳಲಿಲ್ಲ ನಾವು. ಏಕೆಂದರೆ ಅವರು ಬರೆಯುವುದು ಹೀಗೆ ನೋಡಿ. ಹೀಗೇ ಬರೆಯುವುದನ್ನು ಹೇಳಿಬಿಟ್ಟರು ಅವರು.

★ ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಉಪಾಧ್ಯಕ್ಷರು: ಆ ತರಹ ಇದ್ದರೆ ತೆಗೆಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್: ತಾವು ಹೇಳಿದಿರಿ ಡೆಪ್ಯುಟಿಕಮಿಷನರ್ ಕಳುಹಿಸಿದ್ದಾರೆ ಎಂದು. ಅವರು ಏತಕ್ಕೆ ಕನ್ನಡದಲ್ಲಿ ಕಳುಹಿಸುವುದಿಲ್ಲ?

ಶ್ರೀ ಕೆ.ಎನ್.ನಾಗೇಗೌಡ: ಅವರು ಫ್ಯಾಕ್ಸ್ ಕಳುಹಿಸಿದ್ದಾರೆ. ಫ್ಯಾಕ್ಸ್ ಇಂಗ್ಲೀಷಿನಲ್ಲಿ ಬಂದಿದೆ.

ಉಪಾಧ್ಯಕ್ಷರು: ಅರ್ಜೆಂಟಾಗಿ ಬೇಕಾದಾಗ ಕಳುಹಿಸುತ್ತಾರೆ.

ಶ್ರೀ ಎಸ್.ಸುರೇಶ್ ಕುಮಾರ್: ಫ್ಯಾಕ್ಸ್ ಇಂಗ್ಲೀಷಿನಲ್ಲೇ ಕಳುಹಿಸಬೇಕೇ? ಕನ್ನಡದಲ್ಲಿ ಕಳುಹಿಸುವುದಕ್ಕಾಗುವುದಿಲ್ಲವೇ? ಇಂಗ್ಲೀಷಿನಲ್ಲಿ ಮಾತ್ರ ಫ್ಯಾಕ್ಸ್ ಬರುತ್ತದೆಯೇ ಕನ್ನಡದಲ್ಲಿ ಫ್ಯಾಕ್ಸ್ ಬರುವುದಿಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ಅವರು ಅರ್ಜೆಂಟಿಗೆ ಕಳುಹಿಸಿಕೊಟ್ಟಿದ್ದಾರೆ. ನಾನು ಅವರಿಗೆ ಕನ್ನಡದಲ್ಲೇ ಕಳುಹಿಸಿಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಫ್ಯಾಕ್ಸ್ ಇಂಗ್ಲೀಷಿನಲ್ಲಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ಕನ್ನಡದಲ್ಲಿ ಫ್ಯಾಕ್ಸ್ ಮಿಷನ್ ಇಲ್ಲ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು: ಮಾಡಿಕೊಳ್ಳಬಹುದಾಗಿತ್ತು.

ಶ್ರೀ ಎಸ್.ಸುರೇಶ್‌ಕುಮಾರ್: ಇಂಗ್ಲೀಷ್ ಫ್ಯಾಕ್ಸ್ ಕನ್ನಡ ಫ್ಯಾಕ್ಸ್ ಎಂದು ಬೇರೆ ಮಿಷಿನ್ ಇದೆಯೇ?

ಶ್ರೀ ಯು.ಆರ್.ಸಭಾಪತಿ: ಇಂಗ್ಲೀಷಿನಲ್ಲಿ ಬಂದಿದ್ದರೂ ಈ ಸದನದೊಳಗೆ ಹೇಳಿಕೆ ಕೊಡುವಾಗ ಕನ್ನಡದಲ್ಲಿ ಕೊಡಬೇಕಾಗಿತ್ತು.

ಶ್ರೀ ಕೆ.ಎನ್.ನಾಗೇಗೌಡ: ಸಭಾಪತಿಯವರೇ, ಈ ವಿಚಾರ ಮಹತ್ವ ಕೊಡುವಂಥದ್ದಲ್ಲ. ಮಹತ್ವ ಕೊಡಬೇಕಾಗಿರತಕ್ಕಂಥದ್ದು ರೈತರಿಗೆ ನೀರನ್ನು ಕೊಡುವ ವಿಚಾರ. ಈಗಿರತಕ್ಕಂಥದ್ದು ರೈತರಿಗೆ ನೀರಿಲ್ಲದೆ ಸಮಸ್ಯೆಯಾಗಿರುವ ವಿಚಾರ. 100ಕ್ಕೆ 90-95 ಭಾಗ ನಾವು ಕನ್ನಡದಲ್ಲೇ ವ್ಯವಹಾರ ಮಾಡುವಂಥದ್ದು. ಕನ್ನಡದಲ್ಲೇ ಮಾತನಾಡತಕ್ಕಂಥದ್ದು. ಅದನ್ನು ನಾವು ಸುರೇಶ್‌ಕುಮಾರ್ ಅವರಿಂದ, ಸಭಾಪತಿಯವರಿಂದ ಹೇಳಿಸಿಕೊಳ್ಳಬೇಕಾಗಿಲ್ಲ.

ಶ್ರೀ ಸುರೇಶ್‌ಕುಮಾರ್: ಸಚಿವರಿಂದ ಇಂಗ್ಲೀಷ್ ಫ್ಯಾಕ್ಸ್ ಬೇರೆ ಕನ್ನಡ ಫ್ಯಾಕ್ಸ್ ಬೇರೆ

ಎಂದ ಕಲಿಯಬೇಕೇ ನಾವು?

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ: ಸಾರ್, ಇವರಿಗೆ ರೈತರ ಬಗ್ಗೆ ಕಾಳಜಿ ಇಲ್ಲ.

ಉಪಾಧ್ಯಕ್ಷರು: ಸಭಾಪತಿಯವರೇ, ಕೂಡ್ರಿ. ರೆಡ್ಡಿಯವರೇ, ದಯಮಾಡಿ, ಕೂಡ್ರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕನ್ನಡದಲ್ಲಿ ಇರಬೇಕು ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯ ಇಲ್ಲ.

ಉಪಾಧ್ಯಕ್ಷರು: ಅವರು ಏನು ಹೇಳಿದ್ದಾರೆಂದರೆ ಆದಷ್ಟು ಬೇಗ ನಿಮಗೆ ಸಂದೇಶ ಹೇಳುವ ಸಲುವಾಗಿ ಇದನ್ನು ಓದಿದ್ದೇನೆ ಎಂದು ಹೇಳುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕನ್ನಡದಲ್ಲಿ ಬರಬೇಕಾಗಿತ್ತು. ನಮ್ಮದೇನೂ ಭಿನ್ನಾಭಿಪ್ರಾಯ ಇಲ್ಲ. ಆದರೆ ತಂದಿರುವ ವಿಷಯ ಬಹಳ ಮುಖ್ಯವಾಗಿದೆ. ಅದನ್ನು ಸ್ವಲ್ಪ ಹೇಳಿಬಿಡಲಿ ದಯವಿಟ್ಟು. ಪೂರ್ತಿ ಮಾಡಲಿಲ್ಲ ಅವರು. ಇದು ಬಹಳ ಗಂಭೀರವಾದ ವಿಷಯ. 20 ಜನ ರೈತರ ಮೇಲೆ ಫೈರಿಂಗ್‌ಮಾಡಿದ್ದಾರೆ. ಆ ವಿಷಯದ ಗಂಭೀರತೆ ಹೋಗುವುದು ಬೇಡ. ಹೇಳಿಕೆ ಕನ್ನಡದಲ್ಲಿರಬೇಕಾಗಿತ್ತು. ಅದರ ಬಗ್ಗೆ ಏನೂ ಡಿಸ್‌ಪ್ಯೂಟ್ ಇಲ್ಲ. ಗಂಭೀರವಾದ ವಿಷಯವನ್ನು ನಿಲ್ಲಿಸತಕ್ಕದ್ದು ಸರಿಯಲ್ಲ.

SRI K.N.NAGEGOWDA: At about 23.30 Hours of 9-3-98, a mob of about 150-200 farmers are forcibly opened the shutters once again. The Assistant Commissioner, Raichur, PSI, Sirwal and D.A.R. of Police present at the spot tried to prevent them from doing so, and also convinced them against such acts. Instead of seeing by the reason, the mob began to shout and the officials have been pelted with stones. In order to control the situation and ensure the flow of water downstream, the Assistant Commissioner, Raichur ordered the Police to fire rubber bullets in the air. The Police fired three rounds of rubber bullets from their guns. Seeing this, the mob disbursed. No one has sustained any injury in this incident. Based on the complaint of Sri K.Venkatsinghraya, Assistant Executive Engineer,

No.3 Canal Sub-Division, Manvi, in the case Sirwal Police Station, under section 143, 147, 148, 341, 504, 353 of IPC read with 140 IPC. The Police Officials are patrolling in the Sindhanur Taluk at the Mile 46 of the canal on the night after receiving a message around 2.30AM on 10-3-98, immediately rushed to the spot. By then, the situation is under full control.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ನಿನ್ನೆ ನಾನು ಪ್ರಸ್ತಾಪ ಮಾಡಿದಾಗ ಅಲ್ಲಿನ ರೈತರು ಯಾವ ವಿಷಯಕ್ಕೋಸ್ಕರ ರಸ್ತೆ ತಡೆ ಮಾಡಿ ಹೋರಾಟ ಮಾಡಿದ್ದಾರೆ ಆ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಮತ್ತೆ ಗಾಯವಾಗಿರತಕ್ಕ ರೈತರ ಮೇಲೆ ಕೇಸುಗಳನ್ನು ಹಾಕಿದ್ದಾರೆ, ಇವೆರಡು ಕ್ಲಾರಿಫಿಕೇಷನ್‌ಗಳ ಬಗ್ಗೆ ಉತ್ತರ ಕೊಡಬೇಕಾಗಿದೆ. ನೀರಿನ ಗೇಜನ್ನು ಸರಿಯಾದ ರೀತಿಯಲ್ಲಿ ಮೈನ್‌ಟೇನ್ ಮಾಡದೆ ಈ ಸಮಸ್ಯೆ ಉಂಟಾಗಿದೆ. ಕೊನೆಯ ಭಾಗದಲ್ಲಿರತಕ್ಕವರಿಗೆ ತೊಂದರೆಯಾಗಿದೆ. ಮಂತ್ರಿಗಳು ಈ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, 29ನೇ ಕಿಲೋಮೀಟರ್‌ನಲ್ಲಿ ದಿನಾಂಕ 23-7-97ರಲ್ಲಿ ನಾಲೆ ಒಡೆದು ಹೋಯಿತು. 10 ದಿವಸಗಳಲ್ಲಿ ರಾತ್ರಿ ಹಗಲೆನ್ನದೆ ವರ್ಕ್ ಮಾಡಿ ಕೆನಾಲ್ ರಿಪೇರಿ ಮಾಡಿ ನೀರು ಬಿಡಲಾಯಿತು. ಯಾವ ರೀತಿ ಬ್ರೀಚ್ ಆಯಿತು ಗೊತ್ತಿಲ್ಲ 10 ದಿವಸ ಡಿಸ್ಟರ್ಬೆನ್ಸ್ ಆಯಿತು. ನೀರು ಹಂಚತಕ್ಕದ್ದು ಗೌರ್ನಮೆಂಟ್ ಅಲ್ಲ, ಅಲ್ಲಿ ಇರಿಗೇಷನ್ ಕನ್ಸಲ್ಟೇಟೀವ್ ಕಮಿಟಿ ಇಟ್ಟುಕೊಂಡಿದ್ದಾರೆ. ಆ ಕನ್ಸಲ್ಟೇಟೀವ್ ಕಮಿಟಿಯಲ್ಲಿ ರೈತರ ಪ್ರತಿನಿಧಿ, ಕಾಡಾ ಛೇರ್ಮನ್ ಮತ್ತು ಸಂಬಂಧಪಟ್ಟ ಶಾಸಕರು ಎಲ್ಲಾ ಇದ್ದಾರೆ. ಅಲ್ಲಿ ರೊಟೇಷನ್ ಮೇಲೆ ನೀರು ಕೊಡುತ್ತಿದ್ದಾರೆ. 10 ದಿವಸಗಳಲ್ಲಿ ನಾಲೆ ಒಡೆದು ರಿಪೇರಿಯಾಯಿತು. ಆಗ ಎಂಟೈರ್ ಪ್ರೋಗ್ರಾಮ್ ಸ್ವಲ್ಪ ಹೆಚ್ಚುಕಡಿಮೆಯಾಗಿದೆ. ಅದರ ವಿವರ ತರಿಸಲಾಗಿದೆ. 47ನೇ ಮೈಲಿಯಲ್ಲಿ 11.7 ಅಡಿ ಗೇಜ್ ಇದೆ. 69ನೇ ಮೈಲಿಯಲ್ಲಿ 8 ಅಡಿ ಗೇಜ್ ಇದೆ. ಆಮೇಲೆ 1.04 ಮತ್ತು 5.4 ಅಡಿ ಗೇಜ್ ಇದೆ. ಈ ಗೇಜನ್ನು ಸ್ವಲ್ಪ ಇನ್‌ಕ್ರೀಸ್ ಮಾಡಬೇಕಾದರೆ ಸ್ವಲ್ಪ ಟೈಮ್ ಬೇಕಾಗುತ್ತದೆ. ಎರಡನೆಯದು ಅಲ್ಲಿ ರೈತರಿಗೆ ಯಾರಿಗೂ ಗಾಯ ಆಗಿಲ್ಲ. ಇದು ಏನಾಗಿದೆ ದಿನಾಂಕ 9-3-98ರಲ್ಲಿ ಮೇಲುಗಡೆಯಿಂದ ಕೆಳಗಡೆಗೆ ನೀರು ಬಿಡಬೇಕಾಗಿತ್ತು. ಅವರೇ ಹೋಗಿ ಗೇಟುಗಳನ್ನು ಓಪನ್ ಮಾಡಿ ನೀರು ಬಿಟ್ಟಿದ್ದಾರೆ. ನೀರು ಬಿಡಲಿಲ್ಲವೆಂದು 10ನೇ ತಾರೀಖು ಗಲಾಟೆಯಾಗಿದೆ. ಈಗಾಗಲೇ ಕಾಡಾ ಛೇರ್ಮನ್ ಜೊತೆ ಮಾತನಾಡಿದ್ದೇವೆ. ಇಂಜಿನಿಯರ್ ಇಲಾಖೆಯ ಜೊತೆಯಲ್ಲಿ ಮಾತನಾಡಿದ್ದೇವೆ. ಅಸಿಸ್ಟೆಂಟ್ ಕಮೀಷನರ್ ಮತ್ತು ಡೆಪ್ಯುಟಿ ಕಮೀಷನರ್ ಜೊತೆ ಎಲ್ಲರೂ ಸಹ ಮೀಟಿಂಗ್ ಮಾಡಿದ್ದಾರೆ. ಬೆಳಗೆ

ತೊಂದರೆಯಾಗದ ರೀತಿಯಲ್ಲಿ ಗೇಜ್ ಮೆಂಟೇನ್ ಮಾಡಿಕೊಂಡು ಕೊನೆಯವರೆಗೆ ನೀರು ಕೊಡಲಿಕ್ಕೆ ಎಲ್ಲ ವ್ಯವಸ್ಥೆ ಮಾಡಲಾಗಿದೆ.

ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಕೊಪ್ಪಳ ಜಿಲ್ಲೆ ಕುಷ್ಠಗಿ ತಾಲ್ಲೂಕು ಬಗ್ಗೆ ಒಳಗಡೆ ಮಾತುಕತೆ ಮಾಡಿದ್ದಾರೆ ಅದೇನು ಮಾತುಕತೆಯಾಗಿದೆಯೆಂದು ಸದನಕ್ಕೆ ಗೊತ್ತಾಗಬೇಕು.

ಉಪಾಧ್ಯಕ್ಷರು: ತಮ್ಮ ನಾಯಕರು ಒಳಗಡೆ ಇದ್ದಾರೆ ಅವರು ಬಂದಮೇಲೆ ಕೇಳಿ, ಅವರು ಹೇಳುತ್ತಾರೆ.

ಮಾನ್ಯ ಸದಸ್ಯರು: ಅವರು ಬಂದು ತಿಳಿಸುತ್ತಾರೆ. ಅವರು ಹೇಳುತ್ತಾರೆ, ನಾವು ಕೇಳಿಕೊಳ್ಳುವುದು ಕೇಳುತ್ತೇವೆ. ತಾವು ಸದನಕ್ಕೆ ತಿಳಿಸಿ.

ಉಪಾಧ್ಯಕ್ಷರು: ಏಕೆ ನಿಮ್ಮ ನಾಯಕರ ಮೇಲೆ ನಿಮಗೆ ವಿಶ್ವಾಸ ಇಲ್ಲವೆ?

ಮಾನ್ಯ ಸದಸ್ಯರು: ಇದೆ.

ಉಪಾಧ್ಯಕ್ಷರು: ಹಾಗಾದರೆ ಕೂಡ್ರಿ. .ಮಾನ್ಯ ಸಭಾಪತಿಯವರು, ತಾವು ಚರ್ಚೆ ಶುರು ಮಾಡಿ.

ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ (ಮುಂದುವರಿದುದು):

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪಾಧ್ಯಕ್ಷರೆ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣ ಚರ್ವಿತಚರ್ವಣ ಅನಿಸಿದ, ನಿಸ್ತೇಜವಾದ ತೀರಾ ನೀರಸವಾದ ಭಾಷಣವನ್ನು ಸದನದ ಮುಂದಿಟ್ಟಿದ್ದಾರೆಂದು ಹೇಳಬಯಸುತ್ತಿದ್ದೇನೆ. ಅದಕ್ಕಾಗಿ ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡುವಂತಹ ಅನಿವಾರ್ಯ ಪ್ರಸಂಗ ಬಂದಿದೆ. ಮುಖ್ಯವಾಗಿ ಲೋಕಸಭೆಯ ಚುನಾವಣೆ ಮುಕ್ತವಾಗಿ ಮತ್ತು ನ್ಯಾಯಬದ್ಧವಾಗಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಮೊನ್ನೆ ನಡೆದಂತಹ ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ಮತದಾರರ ಯಾದಿಯನ್ನು ತಯಾರಿಸುವಾಗ ಸರ್ಕಾರ ಎಡವಿ ಬಿದ್ದಿದೆ ಎನ್ನುವಂತಹ ಮುಖ್ಯವಾದ ಅಂಶವನ್ನು ನಾನು ಸರ್ಕಾರದ ಮುಂದಿಡಬಯಸುತ್ತೇನೆ. ಒಂದು ವರ್ಷದ ಕೆಳಗೆ 1996ರ ಡಿಸೆಂಬರ್ 25ರಂದು ಉಡುಪಿ ನಗರಸಭೆಗೆ ಚುನಾವಣೆಯಾಗಿದೆ. ಇದೇ 1998ರ ಫೆಬ್ರವರಿಯಲ್ಲಿ ನಡೆದಂತಹ ಚುನಾವಣೆಯ ಸಂದರ್ಭದಲ್ಲಿ ಮತದಾರರ ಯಾದಿಯಲ್ಲಿ ಸುಮಾರು 10 ಸಾವಿರ ಮಂದಿ ಮತದಾರರ ಪಟ್ಟಿಯಲ್ಲಿ ಕಾಣೆಯಾಗಿದ್ದಾರೆ. ಇದು ನನ್ನ ಒಂದು ಕ್ಷೇತ್ರದ ವಿಚಾರವಲ್ಲ. ಜಿಲ್ಲಾದ್ಯಂತ, ರಾಜ್ಯಾದಾದ್ಯಂತ ಪ್ರತಿಯೊಂದು ಕ್ಷೇತ್ರದ ವ್ಯಾಪ್ತಿಯಲ್ಲೂ ಆಗಿದೆ.

ಮತದಾರರ ಯಾದಿಯನ್ನು ಪರಿಷ್ಕರಣೆ ಮಾಡಿ ಅದರಲ್ಲಿ ಲಕ್ಷಾಂತರ ಜನ ನ್ಯಾಯಬದ್ಧವಾಗಿ ಮತ ಚಲಾವಣೆ ಮಾಡತಕ್ಕ ಜನರನ್ನು ಮತದಾನ ಮಾಡದಹಾಗೆ ಮತದಾರರ ಯಾದಿಯನ್ನು ಮಾಡುವುದರ ಮೂಲಕ ಕೆಲಸ ಮಾಡಿದ್ದಾರೆ. ಇವತ್ತು ಮಾನ್ಯ ರಾಜ್ಯಪಾಲರು ಏನು ನ್ಯಾಯಬದ್ಧವಾಗಿ ಚುನಾವಣೆ ಮಾಡಿದ್ದೇವೆಂದು ಹೇಳಿರುವುದಕ್ಕೆ ನಾನು ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇನೆ. ನಾನು ಸರ್ಕಾರಕ್ಕೆ ಗಂಭೀರವಾಗಿ ಹೇಳುವುದೇನೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆ ಇರುವಂತಹ ನಮ್ಮ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಗೂ ಮತದಾನದ ಹಕ್ಕನ್ನು ಕೊಟ್ಟಿದ್ದೇವೆ. ಆದರೆ ಕಳೆದ ಬಾರಿ ಒಂದು ವರ್ಷದ ಕೆಳಗೆ ಮತದಾನ ಮಾಡಿದ ವ್ಯಕ್ತಿ ಈ ಬಾರಿ ಅವನು ಮತದಾನ ಮಾಡದಹಾಗೆ ಮತದಾರರ ಪಟ್ಟಿಯಿಂದ ಅವನ ಹೆಸರನ್ನು ತೆಗೆಯಬೇಕಾದರೆ ನ್ಯಾಯ ಎಲ್ಲಿ ಬಂತು? ನ್ಯಾಯಯುತವಾಗಿ ಚುನಾವಣೆ ನಡೆದಿದೆಯೆ ಎನ್ನುವ ಪ್ರಶ್ನೆಯನ್ನು ಸರ್ಕಾರದ ಮುಂದಿಡಬಯಸುತ್ತೇನೆ. ಅದರಿಂದಾಗಿ ಸರ್ಕಾರದ ನೇತೃತ್ವವನ್ನು ವಹಿಸಿಕೊಂಡಿರತಕ್ಕ ತಮ್ಮಲ್ಲಿ ನನ್ನ ವಿನಂತಿ ಏನೆಂದರೆ ಮುಂದಿನ ಚುನಾವಣೆಯ ಒಳಗಾದರೂ ಕೂಡ ಮತದಾರರ ಯಾದಿಯನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಆ ಮೂಲಕ ಯಾರು ಕಳೆದ ಬಾರಿ ಮತದಾನದಲ್ಲಿ ವಂಚಿತರಾಗಿದ್ದಾರೆ ಅವರನ್ನೆಲ್ಲಾ ಸೇರಿಸಿಕೊಳ್ಳುವಂತಹ ಕೆಲಸವನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡಬೇಕಾದ್ದು ಸರ್ಕಾರದ ಕರ್ತವ್ಯವೆಂದು ಹೇಳಬಯಸುತ್ತೇನೆ.

ಇನ್ನು ವಿವಿಧ ಕ್ಷೇತ್ರಗಳ ಅಭಿವೃದ್ಧಿಯ ಬಗ್ಗೆ ಸರ್ಕಾರದ ಪ್ರಾಮಾಣಿಕ ಪ್ರಯತ್ನದ ಬಗ್ಗೆ ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲ ಮಂತ್ರಿಗಳು ಈ ಸದನದಲ್ಲಿರಲಿ, ಸದನದ ಹೊರಗಡೆ ಇರಲಿ, ಅವರು ಕೊಟ್ಟಂತಹ ಆಶ್ವಾಸನೆಯಲ್ಲಿ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಸದನದ ಒಳಗಡೆ ಯಾರೂ ಮೊಬೈಲ್ ಫೋನ್ ತರಬಾರದೆಂದು ಇದ್ದರೂ ಸಹ ಇಲ್ಲಿ ಫೋನಿನ ಶಬ್ದವಾಗುತ್ತಿದೆ. ಅದಕ್ಕೆ ವಾರಸುದಾರರೇ ಇಲ್ಲ.

ಉಪಾಧ್ಯಕ್ಷರು: ಅದನ್ನು ಹೊರಗಡೆಗೆ ಒಯ್ಯಿರಿ.

ಶ್ರೀ ಯು.ಆರ್.ಸಭಾಪತಿ: ವಾರಸುದಾರರು ಇಲ್ಲದ ಸೆಲ್ಯುಲರ್ ಫೋನ್ ಅದು ಯಾರದು?

ಶ್ರೀ ವಾಟಾಳ್‌ನಾಗರಾಜ್: ಹೇಳುವುದಕ್ಕಾಗುವುದಿಲ್ಲ, ಅದು ಬಾಂಬ್ ಇರಬಹುದು. ಯಾವ ಗಳಿಗೆಯಲ್ಲಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ತಾವು ಎಚ್ಚರಿಕೆಯನ್ನು ವಹಿಸಬೇಕು. ಯಾವ ಮೂಲೆಯಿಂದ ಏನು ಶಬ್ದ ಬರುತ್ತದೆಂದು

ಹೇಳುವುದಕ್ಕಾಗುವುದಿಲ್ಲ. ಇದೇನು ಹುಡುಗಾಟವೇ?

ಉಪಾಧ್ಯಕ್ಷರು: ನೋಡಪ್ಪ ಅದೆಲ್ಲಿದೆ? ಏನಾದರೂ ಇದ್ದರೆ ತೆಗೆದುಕೊಂಡು ಬನ್ನಿ. ಎಲ್ಲಿದೆ ಎಂದು ನೋಡುತ್ತಿದ್ದಾರೆ, ತೆಗೆದುಕೊಂಡು ಬರುತ್ತಾರೆ. ತಾವುಗಳೆಲ್ಲಾ ಕೂಡ್ರಿ.

ಶ್ರೀ ವಾಟಾಳ್‌ನಾಗರಾಜ್: ಅದನ್ನು ತಾವು ಇಟ್ಟುಕೊಳ್ಳಲು ಯಾರಿಗೂ ಕೊಡಬೇಡಿ. ಯಾವ ಗಳಿಗೆಯಲ್ಲಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅಕಸ್ಮಾತ್ ಸಿಡಿದರೆ ಏನುಗತಿ?

ಉಪಾಧ್ಯಕ್ಷರು: ಅದನ್ನು ಟೆಸ್ಟ್ ಮಾಡುವುದಕ್ಕೆ ಕಳುಹಿಸಿ ಕೊಡೋಣ.

ಶ್ರೀ ಯು.ಆರ್.ಸಭಾಪತಿ: ವಿವಿಧ ಕ್ಷೇತ್ರಗಳ ಅಭಿವೃದ್ಧಿಯ ಬಗ್ಗೆ ಪ್ರಮುಖ ಪ್ರದರ್ಶನ ರಾಜ್ಯದಲ್ಲಿ ಮಾಡಲಾಗಿದೆಯೆಂದು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುತ್ತಿದ್ದೇನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಎಲ್ಲಾ ಮಂತ್ರಿಗಳು ಯಾರು ಇದ್ದಾರೆ ಅವರು ಸದನದ ಒಳಗೆ ಹೊರಗೆ ಕೊಟ್ಟಂತಹ ಆಶ್ವಾಸನೆಗಳಲ್ಲಿ ಶೇಕಡ 80ರಷ್ಟು ಕಾರ್ಯಗತವಾಗಿಲ್ಲವೆನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಉದಾಹರಣೆಗೆ ಮಂಗಳೂರಿನಲ್ಲಿ ನಡೆದಂತಹ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮಂಗಳೂರಿಗೆ ಬಂದಾಗ ಎಲ್ಲಾ ಅಧಿಕಾರಿ ವರ್ಗದವರ ಮುಂದೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆಂದು ಹೇಳಿದರು. ಕೊನೆಯ ಗಳಿಗೆಯಲ್ಲಿ 25 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದರು. ಆನಂತರ ಎರಡು ವರ್ಷಕ್ಕೊಮ್ಮೆ ಉಡುಪಿಯಲ್ಲಿ ಪರ್ಯಾಯ ಮಹೋತ್ಸವ ನಡೆಯುತ್ತದೆ. ಆ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನಾವು ಕೇಳಿದಾಗ, ಆ ಕಾರ್ಯಕ್ರಮಗಳನ್ನು ಸರ್ಕಾರದ ಮುಂದಿಟ್ಟಾಗ, ಮುಖ್ಯಮಂತ್ರಿಗಳು ಉಡುಪಿಯಲ್ಲಿ ಎಲ್ಲ ಅಧಿಕಾರಿ ವರ್ಗದವರ ಎದುರಿನಲ್ಲಿ ಘಂಟಾಘೋಷವಾಗಿ 25ಲಕ್ಷ ರೂಪಾಯಿಗಳನ್ನು ಪರ್ಯಾಯ ಮಹೋತ್ಸಕ್ಕೆ ಬಿಡುಗಡೆ ಮಾಡುತ್ತೇನೆಂದು ಹೇಳಿದರು. ಆದರೆ ಇಂದಿನವರೆಗೂ ಕೂಡ ಹಣ ಬಿಡುಗಡೆ ಆಗಿಲ್ಲ. ಇಲ್ಲಿ ಪ್ರಾಮಾಣಿಕತೆ ಎಲ್ಲಿದೆ? ಮುಖ್ಯಮಂತ್ರಿಗಳು ಘೋಷಣೆ ಮಾಡುವಾಗ ಮುಖ್ಯ ಕಾರ್ಯದರ್ಶಿಯವರು ಮತ್ತು ಜಿಲ್ಲಾಧಿಕಾರಿಗಳು ಸಹ ಅಲ್ಲಿ ಉಪಸ್ಥಿತರಿದ್ದರು. ಮಂಗಳೂರಿನಲ್ಲಿ ಅಭಿವೃದ್ಧಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದಾಗ, ಸಾಹಿತ್ಯ ಸಮ್ಮೇಳನದ ಬಗ್ಗೆ ಮಂಗಳೂರಿನ ಶಾಸಕರು ಮತ್ತು ಉಡುಪಿ ಪರ್ಯಾಯ ಮಹೋತ್ಸವದ ಬಗ್ಗೆ ನಾನು ಕೇಳಿದಾಗ ಖಂಡಿತವಾಗಿಯೂ ನಾನು ಹಣ ಬಿಡುಗಡೆ ಮಾಡುತ್ತೇನೆಂದು ಅಭಿವೃದ್ಧಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳ ಸಮ್ಮುಖದಲ್ಲಿ ಹೇಳಿದ್ದರು. ಇವತ್ತು ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಆಶ್ವಾಸನೆಯನ್ನು ಕೊಡುತ್ತಾರೆ, ಏನೆಂದರೆ ನಮಗೆ ಪತ್ರ ಬಂದಿಲ್ಲ ಎಂದು ಹೇಳುತ್ತಾರೆ. ಇದು ನಾಚಿಕೆಗೇಡಿನ ಪ್ರಕರಣ ಎಂದು

ಹೇಳುತ್ತೇನೆ. ಇಂಥದ್ದರಲ್ಲಿ ನೀವು ಪ್ರಾಮಾಣಿಕ ಎಂಬ ಪದವನ್ನು ರಾಜ್ಯಪಾಲರ ಭಾಷಣದಲ್ಲಿ ಅಳವಡಿಸುವುದಾದರೆ ಇದು ಈ ಸದನಕ್ಕೆ ಅಪಮಾನ ಎನ್ನುವ ಮಾತನ್ನು ನಾನು ಹೇಳಲು ಬಯಸುತ್ತೇನೆ. ಇನ್ನು ಹೊಸ ಜಿಲ್ಲೆಯ ಬಗ್ಗೆ ರಚನೆ ಮಾಡಿದ ಕಾರ್ಯಕ್ರಮ ಅತ್ಯಂತ ದಿಟ್ಟತನವಾದುದೆಂದು ಬೆನ್ನು ಚಪ್ಪರಿಕೆಯನ್ನು ಅವರೇ ಮಾಡಿಕೊಂಡಿದ್ದಾರೆ. ನಮ್ಮ ಜಿಲ್ಲೆ ಆಗಸ್ಟ್ 25ರಂದು ಉದ್ಘಾಟನೆ ಆಯಿತು, ಉದ್ಘಾಟನೆ ದಿನ ಮಾನ್ಯ ಮುಖ್ಯಮಂತ್ರಿಗಳು ಒಂದು ದೊಡ್ಡ ಕೀಲಿಯನ್ನು ತೆಗೆದುಕೊಂಡು ಹೋಗಿ ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು. ಅಕ್ಟೋಬರ್ 25ನೇ ತಾರೀಖು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ರಜೆ ತೆಗೆದುಕೊಂಡವರು ಇವತ್ತಿನವರೆಗೂ ಜಿಲ್ಲಾಧಿಕಾರಿಗಳು ನಮ್ಮ ಜಿಲ್ಲೆಗೆ ಯಾರೂ ಇಲ್ಲ. ಜಿಲ್ಲಾಧಿಕಾರಿಗಳ ಕಛೇರಿ ಇವತ್ತು ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಒಂದು ಬೆರಳು ಎಣಿಸುವಷ್ಟು ಅಧಿಕಾರಿಗಳು ಇದ್ದರೂ ಕೂಡ ಯಾವುದೇ ಕಡತ ವಿಲೇವಾರಿಯಾಗುತ್ತಿಲ್ಲ. ಪ್ರಭಾರ ಜಿಲ್ಲಾಧಿಕಾರಿಗಳನ್ನಾಗಿ ಮಂಗಳೂರಿನ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಅಂದರೆ 6 ತಿಂಗಳವರೆಗೆ ನಮ್ಮ ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿಯನ್ನು ನೇಮಕ ಮಾಡಲಿಕ್ಕೆ ಆಗಲಿಲ್ಲ ಎಂದರೆ ಇಲ್ಲಿ ದಿಟ್ಟತನದ ಪ್ರಶ್ನೆ ಎಲ್ಲಿ ಬರುತ್ತದೆ? ಹಾಗಾದರೆ, ಚುನಾವಣೆಯ ಘೋಷಣೆಯನ್ನು ಇಟ್ಟುಕೊಂಡು ಈ ಜಿಲ್ಲೆಗಳನ್ನು ರಚನೆ ಮಾಡಿದರೋ ಅಥವಾ ಜನರಿಗೆ ನಿಜವಾದಂಥ ಮೂಲಭೂತವಾದ ಸೌಕರ್ಯಗಳನ್ನು ಕೊಡಬೇಕು, ಮತ್ತು ಯಾವ ಜಿಲ್ಲೆಯನ್ನು ವಿಭಜನೆ ಮಾಡಬೇಕೆಂಬ ಪ್ರಾಮಾಣಿಕತನ ಪ್ರದರ್ಶನ ಎಲ್ಲಿ ಇದೆ? ನಾವು ಪ್ರತಿಯೊಂದು ಸಭೆ ಸಮಾರಂಭಗಳಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿ ಎಂದು ಕೇಳಿದರೂ ಇದುವರೆಗೂ ನೇಮಕ ಮಾಡಿಲ್ಲ. ಆಗಸ್ಟ್ 25 ರಂದು ಶ್ರೀ ಕೃಷ್ಣ ಜನ್ಮಾಷ್ಟಮಿ ದಿವಸ ಇದೇ ಮುಖ್ಯಮಂತ್ರಿಗಳ ಸಮಕ್ಷಮ ಸುಮಾರು 25 ಸಾವಿರ ಜನರ ಎದುರುಗಡೆ ನಮ್ಮ ನಗರಾಭಿವೃದ್ಧಿ ಮಂತ್ರಿಗಳಾದ ಮಾನ್ಯ ಬಚ್ಚೇಗೌಡರು, ಉಡುಪಿಯಲ್ಲಿರುವ ಸ್ವರ್ಣ ನದಿಯ ಎರಡನೇ ಹಂತದ ಯೋಜನೆಗೆ 22 ಕೋಟಿ ರೂಪಾಯಿಗಳ ಯೋಜನೆಯನ್ನು ಮಂಜೂರಾತಿ ಮಾಡಲು ಶಿಫಾರಸ್ಸು ಮಾಡಲಾಗಿದೆ ಎಂದು ಉಡುಪಿ ನಗರಸಭೆಯಲ್ಲಿ ಹೇಳಿದರು. ಇದು ಆಗಸ್ಟ್ 25ರಂದು ಹೇಳಿದ್ದು. ಇವತ್ತು ಮಾರ್ಚ್ 12ನೇ ತಾರೀಖು, ಅಂದರೆ 6 ತಿಂಗಳ ಕಾಲಾವಧಿಯಲ್ಲಿ ಸ್ವರ್ಣ ನದಿಯ ಎರಡನೇ ಹಂತದ ಯೋಜನೆ ಎಲ್ಲಿ ಹೋಯಿತೆಂದು ನನಗೆ ಗೊತ್ತಿಲ್ಲ? ಇನ್ನು ಅದು ಕಾರ್ಯಗತ ಆಗುವುದು ಸುಳ್ಳು, ಅದರ ಬಗ್ಗೆ ಫೈಲ್ ಪುಟಅಪ್ ಆಗಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಆದರೆ ವೇದಿಕೆಗಳಲ್ಲಿ ಮಂತ್ರಿಗಳು ಈ ರೀತಿಯ ಘೋಷಣೆಯನ್ನು ಮಾಡಿ ಜನರನ್ನು ಮಂಕುಗೊಳಿಸುವಂತಹ ತೀರ್ಮಾನಕ್ಕೆ ಬಂದಿದ್ದರೆ, ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು, ಆ ಮಾತನ್ನು ಹೇಳುವಷ್ಟು ಯೋಗ್ಯತೆ ನನಗೆ ಇಲ್ಲ. ಆದರೆ ಇವರಿಗೆ ಯಾವ ಪದವನ್ನು ಬಳಸಲಿ ಎಂದು ಆಲೋಚನೆ ಮಾಡುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಇವತ್ತು ಮಾನ್ಯ ಸಭಾಪತಿಯವರು ಮಾತನಾಡುತ್ತಿರುವುದನ್ನು ಆಡಳಿತ ಪಕ್ಷದವರು ಯಾರೂ ಕೇಳುತ್ತಿಲ್ಲ ಮತ್ತು ಯಾರೂ ಬರೆದುಕೊಳ್ಳುತ್ತಿಲ್ಲ. ಇದೇನು ಅಸೆಂಬ್ಲಿನ ಅಥವಾ ಧರ್ಮಛತ್ರನಾ?

ಉಪಾಧ್ಯಕ್ಷರು: ಮುಖ್ಯ-ಮಂತ್ರಿಗಳು ಬಂದಿದ್ದಾರೆ ಮತ್ತು ಎಂ.ಪಿ.ಪ್ರಕಾಶ್ ಮತ್ತು ಬೈರೇಗೌಡರು ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎಲ್ಲರೂ ಇದ್ದಾರೆ, ಆದರೆ ಅವರವರ ಬಗ್ಗೆ ಮಾತನಾಡುತ್ತಾ ಕುಳಿತುಕೊಂಡರೆ ಏನು ಪ್ರಯೋಜನ? ಹಾಗಾದರೆ ಅವರು ಏನು ಮಾತನಾಡಿದ್ದಾರೆಂಬುದನ್ನು ಹೇಳಿ?

ಶ್ರೀ ಸಿ.ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಅವರು ಏನು ಮಾತನಾಡಿದ್ದಾರೆ ಅದನ್ನು ಹೇಳಿ ಅಂದರೆ ಇದೇನೂ ಕ್ರಾಸ್ ಎಕ್ಸಾಮಿನೇಷನ್ ಹಾಲ್ ಅಲ್ಲ, ಇದು ಅಸೆಂಬ್ಲಿ ಹಾಲ್. ಬೇಕಾದರೆ ಇಂಚು ಪಟ್ಟಿ ತಂದು ಅಳತೆ ಮಾಡಿ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಈಗ ನಾವು ಕೇಳಿದ್ದು ಏನೆಂದರೆ, ಇಲ್ಲಿ ಯಾರೂ ಬರೆದುಕೊಳ್ಳುವವರು ಇಲ್ಲ ಮತ್ತು ಕೇಳುತ್ತಿರುವವರು ಇಲ್ಲ ಎಂದು ಹೇಳಿದರು. ತಾವು ನಾವೆಲ್ಲಾ ಇಲ್ಲಿ ಇದ್ದೇವೆ ಬೇಕಾದರೆ ಇಂಚು ಪಟ್ಟಿಯಲ್ಲಿ ಅಳತೆ ಮಾಡಿ ಎಂದರೆ ಏನು? ತಾವು ಲೋಕಸಭೆಯಲ್ಲಿ ಸೋತ ಮೇಲೆ ಕೋಪತಾಪ ಜಾಸ್ತಿಯಾಗಿದೆ. ಅಷ್ಟು ಆಗಬಾರದು. ನೋಡಿ ಮತ್ತೆ ಕೋಪಿಸಿಕೊಳ್ಳುತ್ತಿದ್ದೀರಿ. ನೀವು ಇಂಚುಪಟ್ಟಿ ತನ್ನಿ ಅಂದರೆ ಇದರ ಅರ್ಥ ಏನು?

ಶ್ರೀ ಸಿ.ಬೈರೇಗೌಡ: ಸೀರಿಯಸ್‌ನೆಸ್ ಇಲ್ಲ ಅಂದರೆ ಏನು? ಅದನ್ನು ಅಳತೆ ಮಾಡುವುದಕ್ಕೆ ನಾನು ಹೇಳಿದೆ.

ಶ್ರೀ ವಾಟಾಳ್‌ನಾಗರಾಜ್: ಸೀರಿಯಸ್‌ನೆಸ್ ನಿಮಗೆ ಖಂಡಿತವಾಗಿಲ್ಲ, ಪ್ರಾಮಾಣಿಕವಾಗಿಲ್ಲ, ಅದನ್ನು ನೀವು ಒಪ್ಪಿಕೊಳ್ಳಿ. ಯಾವುದಾದರೂ ನೇಣುಕಂಬಕ್ಕೆ ಏರಿಸುವಾಗ ಸುಳ್ಳು ಹೇಳಿ, ಆದರೆ ಇಂಥ ವಿಚಾರದಲ್ಲಿ ಸುಳ್ಳು ಏಕೆ ಹೇಳಬೇಕು?

ಶ್ರೀ ಸಿ.ಬೈರೇಗೌಡ: ಸುಳ್ಳು ಏಕೆ ಹೇಳಬೇಕು? ಮಾನ್ಯ ಖರ್ಗೆಯವರು ನಮಗೆ ಸೀರಿಯಸ್‌ನೆಸ್ ಇಲ್ಲ ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳು 20 ಸಾವಿರ ಜನರ ಎದುರುಗಡೆ ಘೋಷಣೆ ಮಾಡಿದರು, ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಲಿಲ್ಲ, ನಗರಾಭಿವೃದ್ಧಿ ಸಚಿವರು ಬಂದಿದ್ದರು, ಆಗ ಉಡುಪಿ ನಗರಕ್ಕೆ 20 ಕೋಟಿ ರೂಪಾಯಿಗಳ ಹಣವನ್ನು ಕೊಡುತ್ತೇವೆಂದು ಹೇಳಿದರು, ಇವೆಲ್ಲಾ ವಿಷಯವನ್ನು ಮಾನ್ಯ ಸಭಾಪತಿಯವರು ಹೇಳಲಿಲ್ಲವೇ; ಈಗ ಸೀರಿಯಸ್‌ನೆಸ್ ಇಲ್ಲ ಎಂದು ಹೇಳುತ್ತೀರಿ. ಅದಕ್ಕೆ ಅಳತೆ ಕೋಲು ತಂದು ಅಳತೆ ಮಾಡಿ ಎಂದು ಹೇಳಿದೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಈ ತರಹ ಯಾರು ಬೇಕಾದರೂ ಹೇಳಬಹುದು. ಉಡುಪಿ ಬಗ್ಗೆ ಹೇಳಿದ್ದು ಸಹ ಗೊತ್ತಿದೆ. ತಾವು ಸಿಟ್ಟು ಮಾಡಿಕೊಳ್ಳಬೇಡಿ, ವಸ್ತುಸ್ಥಿತಿ ಅಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ರೀತಿ ಹೇಳುತ್ತಾ ಕುಳಿತುಕೊಂಡರೆ ಆಗುವುದಿಲ್ಲ, ನೀವು ಸರ್ಕಾರ ನಡೆಸಬಹುದು, ಆದರೆ ಒಬ್ಬ ಸದಸ್ಯರು ಹೇಳುವಾಗ ನಾವು ಕೇಳುತ್ತಿದ್ದೇವೆಂದು ಹೇಳುವುದಕ್ಕೆ ಯಾರಾದರೂ ಒಬ್ಬರು ಬೇಕಲ್ಲಾ.

ಶ್ರೀ ಸಿ.ಬೈರೇಗೌಡ: ನಾವೆಲ್ಲಾ ಇದ್ದೇವೆ ಮತ್ತು ಕೇಳುತ್ತಾ ಇದ್ದೇವೆ.

ಶ್ರೀ ವಾಟಾಳ್‌ನಾಗರಾಜ್: ನಿಮ್ಮ ಉತ್ತರ ಚೆನ್ನಾಗಿದೆ. ಏಕೆ ನೀವು ದಾರಿ ತಪ್ಪುತ್ತಿದ್ದೀರೋ?

ಉಪಾಧ್ಯಕ್ಷರು: ಸಭಾಪತಿಯವರೇ, ನಿಮ್ಮ ಮಾತನ್ನು ಪ್ರಾರಂಭ ಮಾಡಿ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಬೈರೇಗೌಡರು ಬಹಳ ಗಂಭೀರವಾಗಿ ನಾನು ಹೇಳಿದ್ದಕ್ಕೆ ಪ್ರತಿಸ್ಪಂದಿಸಿದ್ದಾರೆ. ನಾನು ಹೇಳುವುದೇನೆಂದರೆ ನಾನು ಭಾಷಣ ಮಾಡಿದ್ದನ್ನು ನೀವು ಕತೆ ಕೇಳಿದ ಹಾಗೆ ಕೇಳಿದ್ದೀರಾ ಎನ್ನುವುದು ಅಲ್ಲ. ನಿಮ್ಮ ದಿಟ್ಟತನ, ಪ್ರಾಮಾಣಿಕತನದ ಪ್ರದರ್ಶನ ಈ ರಾಜ್ಯಪಾಲರ ಭಾಷಣದಲ್ಲಿ ಮಾಡಿದ್ದೀರಿ, ಸಾರ್ವಜನಿಕರಲ್ಲಿ ಗಂಭೀರವಾದಂಥ, ಮಹತ್ವಪೂರ್ಣವಾದಂಥ ಯೋಜನೆಗಳನ್ನು ಘೋಷಣೆ ಮಾಡಿದ್ದೀರಿ, ಅದನ್ನು ಇವತ್ತಿನವರೆಗೆ ಕಾರ್ಯಗತ ಮಾಡಿಲ್ಲ, ನಿಮ್ಮಲ್ಲಿ ಪ್ರಾಮಾಣಿಕತನ ಎಲ್ಲಿದೆ? ದಿಟ್ಟತನ ಎಲ್ಲಿದೆ ಎಂದು ಹೇಳುವಾಗ ನೀವು ಮುಖಮುಖ ನೋಡಿಕೊಂಡು ಮಾತುಕತೆ ನಡೆಸುತ್ತಿರುವಾಗ, ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತು ನಿಮ್ಮನ್ನು ಎಚ್ಚರಿಸಿದರು. ಸ್ವಲ್ಪ ನಿಮ್ಮ ಪ್ರಾಮಾಣಿಕತನ ಮತ್ತು ದಿಟ್ಟತನ ಇರಲಿ, ಅದನ್ನು ಪ್ರದರ್ಶಿಸಿ. ಕೇವಲ ರಾಜ್ಯಪಾಲರ ಭಾಷಣದಲ್ಲಿ ಪ್ರಿಂಟ್ ಮಾಡಿರುವುದರಿಂದ ಆಗುವುದಿಲ್ಲ. ನಾನು ಶಾಸಕನಾಗಿ ಕಳೆದ 3 ವರ್ಷಗಳಿಂದಲೂ ಈ ಸದನದಲ್ಲಿ ಉಡುಪಿ ನಗರಸಭೆಗೆ ಸ್ವರ್ಣ ನದಿಯ 2ನೇ ಹಂತದ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಈ ಯೋಜನೆಯನ್ನು ನಗರಾಡಳಿತ ಮಂಡಳಿಯ ಮುಂದೆ ಇಟ್ಟಿದ್ದೇವೆ. ಆದರೆ ಇವತ್ತಿಗೂ ಕೂಡ ಸರ್ಕಾರದಿಂದ ಯಾವುದೇ ಕಡತ ವಿಲೇವಾರಿಯ ಲಕ್ಷಣ ಕಾಣುತ್ತಿಲ್ಲ. ಜಿಲ್ಲಾ ಘೋಷಣೆಯನ್ನು ಮಾಡುವ ಸಂದರ್ಭದಲ್ಲಿ ಇವರು ಬಹಿರಂಗವಾಗಿ 22 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದಾಗ ನಮಗೆಲ್ಲಾ ತುಂಬ ಸಂತೋಷವಾಯಿತು. ಆಗ ಎಲ್ಲರೂ ಚಪ್ಪಾಳೆ ಹೊಡೆದರು, ಇವರಿಗೆ ಹಾರ ತುರಾಯಿ, ಕಿರೀಟಗಳನ್ನು ಇಟ್ಟು ಕಳುಹಿಸಿದೆವು. ಇವತ್ತಿಗೆ 6 ತಿಂಗಳು ಆಯಿತು, ನಮಗೆ ನೀರು ಸರಬರಾಜಿನ ಗತಿ ಏನು? ಇದರ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ದಯವಿಟ್ಟು ಹೇಳಿ. ಇವತ್ತು ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ಮಂಡಳಿಗೆ ನೀವು ತುಂಬಾ

ಕಾರ್ಯದಕ್ಷತೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ನೀವು ಇವತ್ತು ಎದೆ ತಟ್ಟಿಕೊಂಡು ಮತ್ತು ಆತ್ಮ ವಿಶ್ವಾಸ ಇದ್ದರೆ ಅಲ್ಲಿಗೆ ಹೋಗಿ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಲ್ಲಿರತಕ್ಕಂಥ ಸಿಂಬ್ಬಂದಿ ವ್ಯವಸ್ಥೆ ಏನು ಎಂಬುದನ್ನು ನೋಡಿಕೊಂಡು ಬಂದರೆ ಗೊತ್ತಾಗುತ್ತದೆ, ಮತ್ತು ಎಷ್ಟು ಜನ ಈ ಮಂಡಲಿಯಲ್ಲಿ ತಾಂತ್ರಿಕ ಪರಿಣಿತರು ಇದ್ದಾರೆ? ಮಂಗಳೂರು ಮತ್ತು ಉಡುಪಿಯ ನಗರಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರತಕ್ಕಂಥ ನಲ್ಲಿ ನೀರಿನ ಸಮಸ್ಯೆಯಿಂದಾಗಿ ಮತ್ತು ಒಳಚರಂಡಿ ಸಮಸ್ಯೆಯಿಂದಾಗಿ ಈ ನಗರಸಭೆಗಳಲ್ಲಿ ಮಲೇರಿಯ ಪೀಡಿತ ಜನರು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವಾಗ, ನಾವು ಆಗಿಂದಾಗ್ಗೆ ಎಚ್ಚರಿಸಿದರೂ ಕೂಡ, ಈ ಯೋಜನೆಗಳ ಬಗ್ಗೆ ಸ್ವಲ್ಪವೂ ಕಾಳಜಿ ವಹಿಸಿಲ್ಲ. ಇಲ್ಲಿ ನಿಮ್ಮ ಪ್ರಾಮಾಣಿಕತನ ಮತ್ತು ದಿಟ್ಟತನ ಎಲ್ಲಿ ಇದೆ ಎಂದು ಪ್ರಶ್ನಿಸುತ್ತಿದ್ದೇನೆ. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಏನು ಇದೆ ಅದನ್ನು ನಿಮ್ಮ ನಿಮ್ಮ ಕ್ಷೇತ್ರದಲ್ಲಿ ದಯವಿಟ್ಟು ನೋಡಿಕೊಳ್ಳಿ, ಆಗ ನಿಮಗೆ ಒಳಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಗೊತ್ತಾಗುತ್ತದೆ. ಈ ಎರಡು ವ್ಯವಸ್ಥೆಗಳು ಸರಿಯಾಗಿ ಇರಬೇಕಾದರೆ ವಿದ್ಯುತ್ ನಿಗಮದಿಂದ ವಿದ್ಯುತ್ ಸರಿಯಾದ ಪ್ರಮಾಣದಲ್ಲಿ ಸರಬರಾಜು ಆಗಬೇಕು. ಇವತ್ತು ವಿದ್ಯುತ್ ಸರಬರಾಜು ಆಗಿಂದಾಗ್ಗೆ ನಿಲುಗಡೆ ಮಾಡಿದ ಒಂದೇ ಕಾರಣಕ್ಕಾಗಿ ಅನೇಕ ಕಡೆ ಹಳ್ಳಿಗಳಿಗೆ ನೀರು ಸರಬರಾಜು ಮಾಡುವುದಕ್ಕೆ ಆಗುತ್ತಿಲ್ಲ. ಒಳಚರಂಡಿ ಮಂಡಳಿಯ ಪಂಪಿಂಗ್ ಸ್ಟೇಷನ್‌ನಲ್ಲಿ ಪಂಪ್‌ಗಳು ಚಾಲನೆ ಆಗದೆ, ಸ್ಥಗಿತಗೊಂಡಿರುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯ ಕಾರ್ಯದಕ್ಷತೆಗೆ ನಾವು ಬಹಳಷ್ಟು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆಂದು ಹೇಳಿದ್ದೀರಿ. ಎಷ್ಟು ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಿಕೊಂಡಿದ್ದೀರಿ? ಎಷ್ಟು ಹಣವನ್ನು ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಗೆ ಕೊಟ್ಟಿದ್ದೀರಿ? ಅದನ್ನು ತೆಗೆದುಕೊಂಡು ಹೋಗಿ ಮುನಿಸಿಪಾಲಿಟಿಗೆ ಕೊಟ್ಟು ನೀವೇ ನೋಡಿಕೊಂಡು ಹೋಗಿ ಎಂದು ಹೇಳಿದ್ದೀರಿ. ಇವತ್ತು ಮುನಿಸಿಪಾಲಿಟಿಯಲ್ಲಿ ಅಷ್ಟೊಂದು ತಾಂತ್ರಿಕ ಸಿಬ್ಬಂದಿಯವರು ಇದ್ದಾರೆಯೆ? ಇವತ್ತು 19 ಪುರಸಭಾ ಸದಸ್ಯರು ಇರತಕ್ಕಂಥ ಒಂದು ಸಣ್ಣ ಉಡುಪಿ ಪುರಸಭೆಯನ್ನು 35 ನಗರ ಸಭಾಸದಸ್ಯರು ಇರತಕ್ಕಂಥ ದೊಡ್ಡ ಐದು ಗ್ರಾಮಗಳನ್ನು ಸೇರಿಸಿ ನಗರಸಭೆಯನ್ನಾಗಿ ಪರಿವರ್ತನೆ ಮಾಡಿದ್ದೀರಿ.

4.40 ಪಿ.ಎಂ

ನಾವೆಲ್ಲರೂ ವಿರೋಧ ಮಾಡಿದ್ದವು. ಬೇಡ ನಿಮ್ಮಿಂದ ಆಗುವುದಿಲ್ಲ ಇದನ್ನು ಸಮಜಾಯಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ವಿರೋಧ ಮಾಡಿದರೂ ಕೂಡ, ಎಲ್ಲಾ ಜನರು, ಆಡಳಿತ ಪಕ್ಷದವರು ಕೂಡ ನಮ್ಮೊಂದಿಗೆ ಸೇರಿ ಬಹಿಷ್ಕರಿಸಿದರೂ ಕೂಡ ಚುನಾವಣೆ ಘೋಷಣೆ ಮಾಡಿ ಚುನಾವಣೆಯನ್ನು ನಡೆಸಿದಿರಿ. ಇವತ್ತು 19 ಪುರಸಭೆ ಇರತಕ್ಕಂಥ ಯಾವ ಉಡುಪಿ ಪುರಸಭೆ ಇದೆ, ಅದರಲ್ಲಿ ಎಷ್ಟು ಸಿಬ್ಬಂದಿಯವರು

ಇದ್ದಾರೆ? ಅದೇ ಸಿಬ್ಬಂದಿಯನ್ನು ನಾವು 35 ನಗರಸಭಾ ಕಚೇರಿಗಳು ಇರತಕ್ಕಂಥ ಒಂದು ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವುದಾದರೂ ಹೇಗೆ ಹೇಳಿ. ಉಡುಪಿ ಪುರಸಭೆಯಲ್ಲಿರುವ 70 ಮಂದಿ ಪೌರಕಾರ್ಮಿಕರಿಂದಲೇ 35 ನಗರಸಭಾ ಸದಸ್ಯರು ಇರತಕ್ಕಂಥ ಮಣಿಪಾಲ, ಪುತ್ತೂರು, ಬೈಲೂರು, ಮೊದಲಾದ ಪ್ರದೇಶಗಳನ್ನು ಒಳಗೊಂಡಂಥ, ಒಂದು ಲಕ್ಷ ಜನಸಂಖ್ಯೆ ಇರತಕ್ಕಂಥ ಜನರಿಗೆ ನಾವು ಯಾವರೀತಿಯಲ್ಲಿ ಒಳಚರಂಡಿ ವ್ಯವಸ್ಥೆಯಾಗಲೀ, ನಗರದ ನೈರ್ಮಲ್ಯ ಕಾಪಾಡುವುದಾಗಲೀ, ಯಾವರೀತಿ ಮಾಡಬೇಕು ಎಂಬುದನ್ನು ಹೇಳಿ. ಇದಕ್ಕೆಲ್ಲಾ ನಿಮ್ಮ ಕಾರ್ಯಕ್ರಮ ಏನಿದೆ? ನಾವು ಈ ಮಾತನ್ನು ಹೇಳಿದರೆ ನೀವು ಒಣಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತೀರಿ. ಅಧಿಕಾರಿಗಳು ಕೊಟ್ಟಂಥ ಸಮಜಾಯಿಷಿ ಕೊಡುತ್ತೀರಿ. ಅಂಕಿಅಂಶಗಳನ್ನು ಕೊಟ್ಟು ಮಾನ್ಯ ಮುಖ್ಯಮಂತ್ರಿಗಳು ತ್ರೇತಾಯುಗ, ದ್ವಾಪರ ಯುಗ, ವಿಶ್ವಾಮಿತ್ರ, ಮೇನಕೆ ಎಂದು ಹೇಳಿಬಿಟ್ಟು 15 ನಿಮಿಷದಲ್ಲಿ ನಮಗೆ ಉತ್ತರಕೊಟ್ಟು ಕುಳಿತುಕೊಂಡುಬಿಡುತ್ತಾರೆ. ನಾವು ಹೇಳಿದ್ದಕ್ಕೆಲ್ಲಾ ತಮಾಷೆ ಮಾಡಿಬಿಡುತ್ತಾರೆ. ಯಾವಾಗ ಕೆ.ಇ.ಬಿ ಬಗ್ಗೆ ನಾವು ಬೆಲೆಯನ್ನು ಏರಿಸಬೇಡಿ, ಬೆಲೆಯೇರಿಸುವುದಿದ್ದರೆ ನಿಮ್ಮ ಹತ್ತಿರ ಸ್ಟ್ರೆಂಗ್ತ್ ಏನಿದೆ ಅದನ್ನು ಕರೆಕ್ಟ್ ಆಗಿ ನೋಡಿಕೊಂಡು ಏರಿಸಿ ಎಂದು ಹೇಳಿದ್ದಕ್ಕೆ ಅವರು ತಮಾಷೆ ಮಾಡಿದರು. ಹಿಂದಿನ ಸಾಲಿನಲ್ಲಿ ನೀವು ಮಾತ್ರ ಬೊಬ್ಬೆ ಹೊಡೆಯುವುದು, ಕರ್ನಾಟಕ ರಾಜ್ಯದಲ್ಲಿ ಯಾರೂ ಬೊಬ್ಬೆ ಹೊಡೆಯುತ್ತಿಲ್ಲ ಎಂದು ಹೇಳಿ ಮುಖ್ಯಮಂತ್ರಿಗಳು ನಮಗೆ ತಮಾಷೆಯಾಡಿದ್ದಾರೆ. ನಮ್ಮ ಮನೆಬಿಲ್ ಎಷ್ಟು ಬರುತ್ತದೆ ಎಂದು ಅವರು ಕೇಳಿದ್ದರು. ಇವತ್ತು ಇಷ್ಟೊಂದು ದೊಡ್ಡ ರೀತಿಯಲ್ಲಿ ವಿದ್ಯುತ್ ಕೊರತೆ ಇದೆ, ಇವತ್ತು ವಿದ್ಯುತ್ ಕೊರತೆಯನ್ನು ಖಂಡಿತ ನಾವು ನಿಲ್ಲಿಸುತ್ತೇವೆ. ಹಿಂದಿನ ಸರ್ಕಾರದವರು ಜನರಿಗೆ ಮರುಳು ಮಾಡುವುದಕ್ಕೋಸ್ಕರ ರೈತರಿಗೆ ಪುಕ್ಕಸಟ್ಟೆ ವಿದ್ಯುತ್ ಕೊಟ್ಟು, ಆಮೇಲೆ ಜನರನ್ನು ಮರುಳುಮಾಡುವುದಕ್ಕೆಂದು ಹೋಗಿ ಇಡೀ ಕೆ.ಇ.ಬಿ.ಧ್ವಂಸ ಆಗಿದೆಯೆಂದು ಹೇಳಿದಿರಲ್ಲಾ ಮುಖ್ಯಮಂತ್ರಿಗಳೇ, ಇವತ್ತು ನೀವು ಕಳೆದವರ್ಷ ಏರಿಸಿದಂಥ ವಿದ್ಯುತ್ ತೆರಿಗೆಯಿಂದ ವಿದ್ಯುತ್ ಇಲಾಖೆಯನ್ನು ಎಷ್ಟರಮಟ್ಟಿಗೆ ಇಂಪ್ರೂವ್ ಮಾಡಿದ್ದೀರಿ ಎಂಬುದನ್ನು ದಯವಿಟ್ಟು ಹೇಳಿ. ಇವತ್ತು ವಿದ್ಯುತ್ ನಿಲುಗಡೆ ಆಗಿಂದಾಗ್ಗೆ ಆಗುತ್ತದೆ. ಮಧ್ಯರಾತ್ರಿಯಲ್ಲಿ ಒಂದೂವರೆ ಗಂಟೆಗೆ ಎರಡೂವರೆ ಗಂಟೆಗೆ ವಿದ್ಯುತ್ ನಿಲುಗಡೆಯಾಗುತ್ತಿದೆ. ಕಳೆದ 20 ದಿವಸಗಳಲ್ಲಿ ಮಕ್ಕಳಿಗೆ ಪರೀಕ್ಷೆ ಬರುತ್ತಿದೆ. ಎಲ್ಲಾ ತರಗತಿಗಳಿಗೆ ಪರೀಕ್ಷೆ ಬರುವಾಗ ಮಧ್ಯಾಹ್ನ, ರಾತ್ರಿ ವಿದ್ಯುತ್ ಇರುವುದಿಲ್ಲ. ಮಾನ್ಯ ದರ್ಶನಾಪುರ್ ರವರೇ, ಇವತ್ತು ಉತ್ತರ ಕೊಡುವಾಗ ವಿದ್ಯುತ್ ನಿಲುಗಡೆ ಬಗ್ಗೆ ಕೇಳಿದ್ದಕ್ಕೆ ನೀವು ಉತ್ತರ ಕೊಡಲಿಲ್ಲ. ನಾಳೆ 27ನೇ ತಾರೀಖು ಸದನ ಮುಗಿಯುವ ತನಕ ನೀವು ವಿದ್ಯುತ್ ನಿಲುಗಡೆಯನ್ನು ನಿಲ್ಲಿಸಬಹುದು. 28ನೇ ತಾರೀಖಿಗೆ ನೀವು ಪ್ರಾರಂಭ ಮಾಡುತ್ತೀರಿ. ಮತ್ತೆ ನೀವು ಹೇಳುತ್ತೀರಿ, ರಾಮಗುಂಡಂ ಹಾಳಾಗಿದೆ, ಇನ್ನೊಂದು ಕಡೆ ಹಾಳಾಗಿದೆ ಎಂದು. ಹಾಗಾದರೆ ಹೊಸ ತೆರಿಗೆಯಿಂದ ಕಲೆಕ್ಟ್ ಮಾಡಿದ ಹಣವನ್ನು ನೀವು ಏನು ಮಾಡಿದ್ದೀರಿ? ತೆರಿಗೆಯ ವಸೂಲಿ ನಂತರ

ನಾವು ಅಲ್ಲಿಗೆ ಹೋದರೆ ಟ್ರಾನ್ಸ್‌ಫಾರ್ಮರ್ ಇಲ್ಲ, ಕಂಬ ಇಲ್ಲ, ತಂತಿ ಇಲ್ಲ ಎನ್ನುವ ಮಾತನ್ನು ಕೆ.ಇ.ಬಿ. ಅಧಿಕಾರಿಗಳು ಹೇಳುತ್ತಾರೆ. ಜನಸಾಮಾನ್ಯರಿಗೆ ನಾವು ಏನು ಉತ್ತರವನ್ನು ಕೊಡಬೇಕು? ಒಂದು ಗ್ರಾಮಾಂತರ ಪ್ರದೇಶದ ಹಳ್ಳಿಯ ನೀರು ಸರಬರಾಜಿನ ವಿಷಯದಲ್ಲಿ ನನ್ನದೇ ಕ್ಷೇತ್ರದ ಉದಾಹರಣೆಯನ್ನು ಹೇಳುತ್ತೇನೆ. ಅಲೆಯೂರಿನಲ್ಲಿ ಮೊನ್ನೆ ನೀರಿನ ಸರಬರಾಜಿಗೋಸ್ಕರ ನಾವು ಬೋರ್‌ವೆಲ್ ಹಾಕಿ ಒಂದು ಪಂಪನ್ನು ಹಾಕಿದ್ದೇವೆ. ಅಲ್ಲಿಂದ ವೈರ್ ಕನೆಕ್ಷನ್ ಕೊಡುವುದಕ್ಕೆ ಒಂದು ಆರ್.ಸಿ.ಸಿ. ಕಂಬ ತೆಗೆದುಕೊಳ್ಳುವುದಕ್ಕೆ ನನಗೆ 20 ದಿವಸಗಳಿಂದ ಆಗಲಿಲ್ಲ. ಈಗ ಬೇಸಿಗೆ ಪ್ರಾರಂಭವಾಯಿತು, ಜನರು ನೀರಿಗಾಗಿ ಹಾಹಾಕಾರ ಎಬ್ಬಿಸುತ್ತಿದ್ದಾರೆ. ಒಂದು ಕಡೆ ಪಂಪು ಇದ್ದರೂ ಲೋವೋಲ್ಟೇಜ್ ನಿಮ್ಮದು. ಲೋ ವೋಲ್ಟೇಜ್‌ನಿಂದ ಪಂಪು ಚಾಲೂ ಆಗುವುದಿಲ್ಲ. ಪಂಪು ಚಾಲೂ ಆಗದೆ ಇದ್ದರೆ ಓವರ್‌ಹೆಡ್ ಟ್ಯಾಂಕ್‌ಗೆ ನೀರು ತುಂಬುವುದಿಲ್ಲ. ನಮ್ಮಲ್ಲಿ ಉಪ್ಪುನೀರು ಕುಡಿಯುವ ಜನರು ಇರುತ್ತಾರೆ. ಒಂದು ಕಡೆ ಸಮುದ್ರತೀರ ಮತ್ತೊಂದು ಕಡೆ ಹೊಳೆಯ ಮಧ್ಯದಲ್ಲಿ ಇರುವ ಏನು ಕುದ್ರುಗಳು ಇವೆ, ಅವರಿಗೆ ಸಿಹಿನೀರಿನ ಒಂದು ಕಷ್ಟ ಇರುವಾಗ ನಾವು ಪೈಪ್‌ಲೈನ್ ಹಾಕಿ ಅವರಿಗಾಗಿ ಸಿಹಿನೀರಿನ ಯೋಜನೆ ಹಾಕಿದರೂ ಕೂಡ ನಿಮ್ಮ ಪಂಪಿಂಗ್ ಸ್ಟೇಷನ್‌ನಲ್ಲಿ ವಿದ್ಯುತ್ ನಿಲುಗಡೆ ಆಗಿ ಪಂಪು ಚಾಲೂ ಆಗುವುದಿಲ್ಲ. ಒಂದುವೇಳೆ ವಿದ್ಯುತ್ ಬಂದರೂ ಕೂಡ ಲೋವೋಲ್ಟೇಜ್‌ನಿಂದ ಪಂಪು ಚಾಲೂ ಆಗುವುದಿಲ್ಲ. ಈರೀತಿಯಾಗಿ ಆ ಜನ ಉಪ್ಪುನೀರು ಕುಡಿಯುವ ಪರಿಸ್ಥಿತಿಯನ್ನು ಒದಗಿಸಿದ್ದೀರಲ್ಲಾ, ಇದು ಸರಿಯೇ? ವಿದ್ಯುತ್ ತೆರಿಗೆ ವಿಧಿಸುವಾಗ ಒಳ್ಳೆಯ ರಸಕವಳದ ಹಾಗೆ ನಿಮ್ಮ ಬಾಯಿಂದ ಮಾತು ಬಂದಿತ್ತು. ಒಂದು ವರ್ಷದಲ್ಲಿ ನಿಮ್ಮ ಸಾಧನೆ ಏನು ಎಂಬುನ್ನು ದಯವಿಟ್ಟು ಅಂಕಿಅಂಶಗಳಲ್ಲಿ ಇಲ್ಲಿ ಹೇಳಿ. ಜನ ನಿಮ್ಮನ್ನು ಉಗುಳುತ್ತಾರೆ. ಮಾನ್ಯ ಯಡಿಯೂರಪ್ಪನವರು ಏನೋ ಒಂದು ಭಾಷೆಯಲ್ಲಿ ನಿಮಗೆ ಹೇಳಿದರು. ಆ ಭಾಷೆಯಲ್ಲಿ ಹೇಳುವುದಕ್ಕೆ ನಮಗೆ ಬರುವುದಿಲ್ಲ. ಅವರು ಹಿರಿಯರು. ಆದರೆ ನಿಮಗೆ ಯಾವ ಭಾಷೆಯಲ್ಲಿ ಹೇಳಬೇಕು ಎಂಬುದನ್ನು ಹುಡುಕಾಡುತ್ತಿದ್ದೇವೆ. ನಾನು ಸರ್ಕಾರವನ್ನು ಕೇಳುತ್ತಿರುವುದು ಇಷ್ಟೇ. ಒಳಚರಂಡಿ ಯೋಜನೆಯ ಮಂಡಳಿಯಲ್ಲಿ ಅದರಲ್ಲಿರುವ ತಾಂತ್ರಿಕ ಸಿಬ್ಬಂದಿ ವರ್ಗವನ್ನು ಹೆಚ್ಚಿಸದೇ ಇದ್ದರೆ ನಿಮಗೆ ಕಾರ್ಯದಕ್ಷತೆ ಖಂಡಿತ ಬರುವುದಿಲ್ಲ. ಅದಕ್ಕಾಗಿ ಅತ್ಯಂತ ಹೆಚ್ಚಿನ ಹಣವನ್ನು ಮುಂಗಡಪತ್ರದಲ್ಲಿಯಾದರೂ ನೀವು ಹಾಕಬೇಕು. ಎಲ್ಲೆಲ್ಲಿ ಯಾವ್ಯಾವ ಕಡೆಗಳಲ್ಲಿ ನಗರಸಭೆಗಳು ಇವೆಯೋ, ಎಲ್ಲೆಲ್ಲಿ ನೀರುಸರಬರಾಜಿನ ಯೋಜನೆಗಳು ನಿಮ್ಮ ಮುಂದೆ ಇವೆಯೋ, ಅದಕ್ಕೆ ಪ್ರಥಮ ಆದ್ಯತೆಯನ್ನು ನೀವು ದಯವಿಟ್ಟು ಕೊಡಿ. ಇವತ್ತು ನೀರು ಸರಬರಾಜು ಇಲ್ಲದೆ, ಒಳಚರಂಡಿ ಅವ್ಯವಸ್ಥೆಯಿಂದಾಗಿ, ಪ್ರತಿಯೊಂದು ದೊಡ್ಡದೊಡ್ಡ ನಗರಪ್ರದೇಶಗಳಲ್ಲಿ ಕಾಲರಾ, ಮಲೇರಿಯಾದಂಥ ಸಾಂಕ್ರಾಮಿಕ ರೋಗಗಳು ಹಬ್ಬಿಕೊಳ್ಳುವಂಥ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಆದ್ಯತೆ ಮೇರೆಗೆ ಸ್ವಚ್ಛತಾ ಕೆಲಸಗಳು ನಡೆಯಬೇಕಾಗಿದೆ. ಒಳಚರಂಡಿ ವ್ಯವಸ್ಥೆಯನ್ನು ಸುವ್ಯವಸ್ಥಿತವನ್ನಾಗಿ

ಮಾಡಬೇಕಾಗಿದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು ಏನೆಂದರೆ, ತಾವು ಆಗಸ್ಟ್ ತಿಂಗಳ 25ನೇ ತಾರೀಖಿನಲ್ಲಿ ಬಂದಾಗ ಮಾನ್ಯ ಬಚ್ಚೇಗೌಡರು 22 ಕೋಟಿ ರೂಪಾಯಿಗಳ ಉಡುಪಿ ನಗರಸಭೆಯ ಸ್ವರ್ಣಾನದಿಯ ಎರಡನೇ ಯೋಜನೆಗೆ ಮಂಜೂರಾತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇವತ್ತಿನವರೆಗೂ ಏನೂ ಆಗಿಲ್ಲ. ಆ ಪ್ರಸ್ತಾವನೆ ಎಲ್ಲಿಯೋ ಕೊಳೆಯುತ್ತಾ ಬಿದ್ದಿದೆ. ದಯವಿಟ್ಟು ಸ್ವರ್ಣಾನದಿಯ ಎರಡನೇ ಹಂತದ ಯೋಜನೆಯನ್ನು ಮುಂದಿನ ಮುಂಗಡ ಪತ್ರದಲ್ಲಿ ಅಳವಡಿಸಬೇಕೆಂದು ನಿಮ್ಮಲ್ಲಿ ಕೈಜೋಡಿಸಿಕೊಂಡು ನಾನು ಉಡುಪಿ ನಗರದ ಜನರ ಪರವಾಗಿ ವಿನಂತಿಸಿಕೊಳ್ಳುತ್ತೇನೆ. ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ಆಗಿರುವ, ಆಗಲಿರುವ ಪರಿಸರ ಮಾಲಿನ್ಯದ ಬಗ್ಗೆ ನಮ್ಮದು ಅರಣ್ಯರೋದನವಾಗಿದೆ. ಪ್ರತಿ ಸಭೆಗಳಲ್ಲಿ ಮಾತಾಡಿ ಮಾತಾಡಿ ಅದು ಅರಣ್ಯರೋದನವೇ ಆಗಿಹೋಗಿದೆ. ಮಾನ್ಯ ಹಿಂದಿನ ಕೈಗಾರಿಕಾ ಸಚಿವರಾದ ದೇಶಪಾಂಡೆಯವರು ಒಂದು ಆಣತಿಯನ್ನು ಕೊಟ್ಟರು. ಸದನ ಮುಗಿದ ಕೂಡಲೇ ಒಂದು ಸಭೆಯನ್ನು ಸೇರಿಸುತ್ತೇನೆ ಎಂದು ಅವರು ಹೇಳಿದ್ದರು. ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರತಕ್ಕಂಥ ಕೈಗಾರಿಕೆಗಳು ಏನಿವೆ, ಈಗ ಇರತಕ್ಕಂಥ ಕೈಗಾರಿಕೆಗಳು, ಮುಂದೆ ಬರತಕ್ಕಂಥ ಕೈಗಾರಿಕೆಗಳ ಬಗ್ಗೆ ಯಾವರೀತಿ ಪರಿಸರ ಮಾಲಿನ್ಯವಾಗುತ್ತದೆ ಎನ್ನುವುದರ ಬಗ್ಗೆ ನಾವು ಕುಳಿತುಕೊಂಡು ಚಿಂತನೆ ಮಾಡೋಣ ಎಂದು ಅವರು ಹೇಳಿದರು. ನಾವು ಒಪ್ಪಿಕೊಂಡೆವು ಮತ್ತು ಅವರು ಒಂದು ಮೀಟಿಂಗನ್ನು ಕರೆದರು. ಆ ಮೀಟಿಂಗ್‌ನಲ್ಲಿ ನಾನು ಎಲ್ಲಾ ಅಂಕಿಅಂಶಗಳೊಂದಿಗೆ ವಿವರವನ್ನು ಕೊಟ್ಟೆ. ಬೃಹತ್ ಕೈಗಾರಿಕೆಗಳ ಬಗ್ಗೆ ಸರ್ಕಾರದಿಂದ ಏನು ಆದೇಶ ಹೊರಟಿದೆ ಎಂಬುದರ ಬಗ್ಗೆ ಹೇಳಿದೆ. ನವಮಂಗಳೂರು ಬಂದರು ಏನಿದೆ, ಅದೊಂದು ಅಪಾಯದ ಕೇಂದ್ರ ಬಿಂದು ಆಗುತ್ತದೆ ಎನ್ನುವ ಎಚ್ಚರಿಕೆಯ ಮಾತನ್ನು ನಾನು ಹೇಳಿದೆ. ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ಬರತಕ್ಕಂಥ ಎಲ್ಲಾ ವಿಷಾನಿಲಗಳು, ಕೈಗಾರಿಕೆಗಳಿಗೆ ಎಲ್ಲಾ ಬೇಕಾದಂಥ ವಿಷಕಾರಕ, ವಿಷಪೂರಿತ ಅನಿಲಗಳು ಸ್ಟೋರೇಜ್ ಆಗುತ್ತಾ ಬಂದು ನಿಲ್ಲುವುದು ನವಮಂಗಳೂರು ಬಂದರಿನಲ್ಲಿ; ಸ್ಟೋರೇಜ್ ಫೆಸಿಲಿಟಿಯನ್ನು ಅಲ್ಲಿ ಮಾಡಿದ್ದಾರೆ. ಸ್ವಲ್ಪ ಬೆಂಕಿ ಏನಾದರೂ ತಾಗಿತು ಎಂದರೆ ಇಡೀ ಮಂಗಳೂರು ಪಟ್ಟಣ ಸುಟ್ಟುಹೋಗುತ್ತದೆ ಎಂಬ ಮಾತನ್ನು ಸವಿವರವಾಗಿ ನಾನು ಅವರಿಗೆ ಹೇಳಿದ್ದೆ. ಈಗ ಇರತಕ್ಕಂಥ ಕುದುರೆಮುಖ ಇರಲಿ, ಎನ್.ಸಿ.ಎಫ್ ಇರಲಿ, ಎಂ.ಆರ್.ಪಿ.ಎಲ್ ಇರಲಿ, ಅದರಲ್ಲಿ ಪರಿಸರ ಮಾಲಿನ್ಯವಾಗುವಂಥ ವಿಚಾರಗಳು ಏನಿವೆ, ಅದನ್ನು ಮತ್ತೊಮ್ಮೆ ಅಂಕಿಅಂಶಗಳೊಂದಿಗೆ ಕೊಟ್ಟೆ. ಪರಿಸರ ಮಾಲಿನ್ಯ ಇಲಾಖೆಯ ಕಾರ್ಯದರ್ಶಿಗಳೂ ಇದ್ದರು; ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳೂ ಇದ್ದರು. ಮುಂದಿನ ತಿಂಗಳು ಮೀಟಿಂಗ್ ಕರೆಯುತ್ತೇವೆ ಎಂದು ಅಕ್ಟೋಬರ್ ತಿಂಗಳಲ್ಲಿ ಹೋದವರು ಈಗ ಅವರ ಪಕ್ಷಕ್ಕೆ ರಾಜೀನಾಮೆ ಕೊಟ್ಟು, ಕೈಗಾರಿಕಾ ಮಂತ್ರಿ ಪದವಿಗೂ ರಾಜೀನಾಮೆ ಕೊಟ್ಟು ಆ ಕಡೆಗೆ ಹೋಗಿ ಕುಳಿತುಕೊಂಡುಬಿಟ್ಟರು. ಹಾಗಾದರೆ ನಾವು ಏಕೆ ಈ ಸದನದಲ್ಲಿ, ಮೂರು ವರ್ಷಗಳಲ್ಲಿ ಅವಿರತವಾಗಿ ಬೃಹತ್

ಕೈಗಾರಿಕೆಗಳಿಂದ ಆಗತಕ್ಕಂಥ ಅನ್ಯಾಯಗಳ ವಿರುದ್ಧ ನಾವು ಭಾಷಣ ಮಾಡಿದ್ದನ್ನೆಲ್ಲಾ ನಾವು ಯೋಜನೆಗಳಿಗೆ ಅಡ್ಡಿಪಡಿಸುವವರು ಎಂದು ಹೇಳಿಕೊಂಡು ಬಹಳ ಒಂದು ತಾತ್ಸಾರದ ಹೇಳಿಕೆಯನ್ನು ಹೇಳಿಬಿಟ್ಟರು. ಅಂಕಿಅಂಶಗಳ ಜೊತೆಗೆ ಸದನದ ಮುಂದೆ ಮಂಡಿಸಿದರೂ ಕೂಡ ಅದು ಅರಣ್ಯರೋದನ ಆಗುವುದಿದ್ದರೆ ನಿಮ್ಮ ಪ್ರಾಮಾಣಿಕತನ, ನಿಮ್ಮ ದಿಟ್ಟತನ ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನು ಬೆಳಕು ಚೆಲ್ಲುತ್ತದೆ ಎಂಬುದನ್ನು ಸ್ವಲ್ಪ ನೀವು ಕಣ್ತೆರೆದು ನೋಡಿ. ನವಮಂಗಳೂರು ಬಂದರಿನಲ್ಲಿ ಇರತಕ್ಕಂಥ ಅಪಾಯದ ಸಂಕೇತವನ್ನು ನಾನು ಕೊಟ್ಟಿದ್ದೇನೆ. ಪರಿಸರ ಮಾಲಿನ್ಯದ ಕಾರ್ಯದರ್ಶಿಗಳೂ ಕೂಡ ಅದನ್ನು ಒಪ್ಪಿಕೊಂಡಿದ್ದಾರೆ. ಅಲ್ಲಿ ಯಾವರೀತಿ ರಕ್ಷಣಾ ವ್ಯವಸ್ಥೆ ಇದೆಯೆನ್ನುವುದನ್ನು ತನಿಖೆ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅದನ್ನು ಮಾಡಲಿಲ್ಲ. ಅದರ ಮೇಲೆ ಪುನಃ ಎಲ್ ಆಂಡ್ ಟಿ ಅವರಿಗೆ ಸಿಮೆಂಟ್‌ನ್ನು ಚೀಲದಲ್ಲಿ ತುಂಬುವಂಥ ಕಾರ್ಖಾನೆಗೆ ಹೊಸದಾಗಿ ಅನುಮತಿಯನ್ನು ಕೊಟ್ಟಿದ್ದಾರೆ. ಅದರಿಂದ ಪುನಃ ಅಲ್ಲಿ ಎಷ್ಟೊಂದು ಧೂಳಿನಿಂದ ವಾಯುಮಾಲಿನ್ಯ ಆಗುತ್ತದೆ ಎಂದು ನಮಗೆ ಗೊತ್ತಿಲ್ಲ. ಅದನ್ನು ಕೂಡ ಅಕ್ಟೋಬರ್‌ನಲ್ಲಿ ನಡೆದ ಸಭೆಯಲ್ಲಿ ನಾನು ಹೇಳಿದ್ದೇನೆ. ಅದನ್ನು ಅವರ ಗಮನಕ್ಕೆ ತರುತ್ತೇವೆ. ನಾನು ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜ್‌ಗೆ ಹೋಗಿ ಅಲ್ಲಿಯ ಪ್ರಾಧ್ಯಾಪಕರೊಂದಿಗೆ ಒಟ್ಟಿಗೆ ಕುಳಿತುಕೊಂಡು, ಆ ಪರಿಸರಕ್ಕೆಲ್ಲಾ ತಿರುಗಾಟ ಮಾಡಿ ಮೂರುದಿವಸ ಅಧ್ಯಯನ ಮಾಡಿ ಅಂಕಿಅಂಶಗಳನ್ನು ಎಲ್ಲಾ ತಂದು ಇವರ ಕೈಗೆ ಕೊಟ್ಟೆ. ನಾನು ಹಾರಿಕೆಯ ಪ್ರಶ್ನೆಯನ್ನು ಈ ಸರ್ಕಾರದ ಮುಂದೆ ಇಡುವುದಿಲ್ಲ. ಬೂಟಾಟಿಕೆ, ರಾಜಕೀಯಕ್ಕಾಗಿ ಈ ಸದನವನ್ನು ನಾನು ಬಳಸುವುದಿಲ್ಲ. ರಚನಾತ್ಮಕ ಕಾರ್ಯಕ್ರಮವನ್ನು ನಿಮ್ಮ ಸರ್ಕಾರ ಮಾಡಬೇಕು ಎನ್ನುವ ದೃಷ್ಟಿಯಿಂದ ಅಂಕಿಅಂಶಗಳನ್ನು ಕೊಟ್ಟರೂ ಕೂಡ ನನಗೆ ಅದಕ್ಕೆ ಉತ್ತರ ಸಿಗುವುದಿಲ್ಲ ಎಂದು ಆದರೆ, ನಿಮ್ಮ ಪ್ರಾಮಾಣಿಕತೆ ಎಲ್ಲಿದೆ ಎಂಬುದನ್ನು ದಯವಿಟ್ಟು ಹೇಳಲಿ. ಇನ್ನೊಂದು ವಿಶೇಷವಾದುದು ಏನೆಂದರೆ, ರಾಜ್ಯಪಾಲರ ಭಾಷಣದ 6ನೇ ಪುಟದಲ್ಲಿ 11ನೇ ಪ್ಯಾರಾದಲ್ಲಿ-ಅಂಕೋಲಾ-ಹುಬ್ಬಳ್ಳಿ ರಾಜ್ಯ ಹೆದ್ದಾರಿ ನಿರ್ಮಾಣ ಮಾಡಿದ್ದೀರಿ ಎನ್ನುವ ಮಾತು ಎಷ್ಟು ಸತ್ಯಾಂಶದಿಂದ ಕೂಡಿದೆಯೋ ನನಗೆ ಗೊತ್ತಿಲ್ಲ, ಇಲ್ಲಿ ಹುಬ್ಬಳ್ಳಿ-ಧಾರವಾಡದವರು ಎಲ್ಲಾ ಇದ್ದಾರೆ. ಈ ಅಂಕೋಲಾ-ಹುಬ್ಬಳ್ಳಿ ರಾಜ್ಯ ಹೆದ್ದಾರಿ ನಿರ್ಮಾಣಗೊಂಡಿದ್ದು ಯಾವಾಗ? ಯಾವ ಕಾಲದಲ್ಲಿ ಆಗಿದ್ದನ್ನು ಇಲ್ಲಿ ರಾಜ್ಯಪಾಲರು ಹೆಗ್ಗಳಿಕೆಯ ಮಾತನ್ನಾಗಿ ಉಪಯೋಗಿಸಿಕೊಂಡಿದ್ದಾರೆ? ದಯವಿಟ್ಟು ಸದನಕ್ಕೆ ಸತ್ಯಾಂಶವನ್ನು ಕೊಡಿ. ಅಂಕೋಲಾ-ಹುಬ್ಬಳ್ಳಿ ಹೆದ್ದಾರಿಯಾದದ್ದು ಈ ಸರ್ಕಾರ ಬಂದಾಗ ಅಲ್ಲ. ಹಿಂದಿನ ಸರ್ಕಾರ ಇದ್ದಾಗಲೇ ಅದು ಆದದ್ದು. ಅದನ್ನು ಈ ಅಧಿವೇಶನದಲ್ಲಿ ಮತ್ತೆ ಯಾಕೆ ಪ್ರಸ್ತಾವನೆ ಮಾಡಿದ್ದಾರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಹಾಗಾದರೆ ರಾಜ್ಯಪಾಲರ ಭಾಷಣವನ್ನು ಪ್ರಿಂಟ್ ಮಾಡತಕ್ಕಂಥ ಅಧಿಕಾರಿಗಳು ಯಾರಿದ್ದಾರೆ, ಅವರು ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ

ಎಂಬ ಮಾತನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಈ ರೀತಿಯ ಎಲ್ಲಾ ಕೆಟ್ಟದರಲ್ಲೂ ಒಂದು ಒಳ್ಳೆಯ ವಿಷಯ ಇದೆ. ಅದು ವಿದ್ಯಾ ಇಲಾಖೆ. ವಿದ್ಯಾ ಇಲಾಖೆಯ ಸಚಿವರನ್ನು ಮಾತ್ರ ನಾನು ಎಷ್ಟು ಪ್ರಶಂಸಿದರೂ ಸಾಕಾಗುವುದಿಲ್ಲ. ಕೆಲವೆಲ್ಲಾ ಲೋಪದೋಷಗಳು ಇದ್ದೇ ಇವೆ. ಇವತ್ತು ಒಂದೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 36 ಕೊಠಡಿಗಳನ್ನು ಕಟ್ಟಿಸಿ, ಮಾರ್ಚಿ ತಿಂಗಳ ಅವಧಿಯೊಳಗೆ ಪೂರ್ಣವಾಗಬೇಕೆಂದು ಹೇಳಿ, ಹಣ ಕೂಡ ಬಿಡುಗಡೆ ಮಾಡಿದ್ದಾರೆ. ನೇತಾಜಿ ಪ್ರೌಢಶಾಲೆ ಎಂದು ಹೇಳಿ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರವ್ಯಾಪ್ತಿಗೆ ನೇತಾಜಿ ಸುಭಾಶ್‌ಚಂದ್ರಬೋಸ್‌ರ ಜನ್ಮ ಶತಾಬ್ದಿ ನೆನಪಿಗಾಗಿ 9 ಲಕ್ಷ ಹಣ ಬಿಡುಗಡೆ ಮಾಡಿದ್ದಾರೆ. ಆದರೆ, ಸಿದ್ದರಾಮಯ್ಯನವರಿಗೂ ನಮ್ಮ ಗೋವಿಂದೇಗೌಡರಿಗೂ ಬಹಳ ಸಂಪರ್ಕ ಇರಬಹುದು ಅಥವಾ ಮುಖ್ಯಮಂತ್ರಿಗಳಿಗೂ ಗೋವಿಂದೇಗೌಡರಿಗೂ ಬಹಳ ಸಂಪರ್ಕ ಇರಬೇಕು. ಏಕೆಂದರೆ, ನಿಮ್ಮ ಇಲಾಖೆಗೆ ಅಷ್ಟುಬೇಗ ಹಣ ಬಿಡುಗಡೆಯಾಗಿ ಹೇಗೆ ಇಷ್ಟೊಂದು ಜನಪ್ರಿಯ ಕಾರ್ಯಕ್ರಮಗಳನ್ನು ಮಾಡುವುದಕ್ಕಾಯಿತು. ಉಳಿದ ಇಲಾಖೆಗಳಿಗೆ ಏಕೆ ಆಗುತ್ತಾ ಇಲ್ಲ. ಈ ಬಾರಿ 9 ಲಕ್ಷ ಬಿಡುಗಡೆ ಮಾಡಿದ್ದು ಮಾತ್ರವಲ್ಲ. ಮಾರ್ಚಿಯೊಳಗೆ 3 ಲಕ್ಷ ಖರ್ಚು ಮಾಡಬೇಕೆಂದು ಅನುದಾನ ಕೂಡ ಬಿಡುಗಡೆ ಮಾಡಿದ್ದಾರೆ. ನಮಗೆ ಬಂದಿದೆ. ಆದದ್ದನ್ನು ಆದಹಾಗೆ ಹೇಳಬೇಕು. ಅದರಲ್ಲಿ ನಾನು ಯಾವರೀತಿಯಲ್ಲೂ ಮುಚ್ಚುಮರೆ ಇಟ್ಟುಕೊಳ್ಳುವುದಿಲ್ಲ. ಏನಿದ್ದರೂ ಕೂಡ ಇನ್ನಷ್ಟು ಶಿಕ್ಷಕರನ್ನು ನೇಮಕಾತಿ ಮಾಡುವುದರ ಜೊತೆಗೆ ವಿದ್ಯಾ ಇಲಾಖೆಯನ್ನು ಬಲಪಡಿಸಿ, ಆ ಮೂಲಕ ಗ್ರಾಮಾಂತರ ಪ್ರದೇಶಗಳ ಪ್ರತಿಯೊಂದು ವಿದ್ಯಾರ್ಥಿಗಳಿಗೂ ಕೂಡ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಪೀಠೋಪಕರಣ ಅಥವಾ ಯಾವುದೇ ಶಾಲೆಯ ಕಟ್ಟಡದ ದುರಸ್ತಿಗಾಗಲೀ ಹಣ ಬಿಡುಗಡೆಯಾಗಲೀ ಅದನ್ನು ಬಹಳ ಸೂಕ್ಷ್ಮವಾಗಿ ಮಾಡಿಕೊಂಡು ಹೋಗಿದ್ದಾರೆ. ಅದಕ್ಕಾಗಿ ನಾನು ಮತ್ತೊಮ್ಮೆ ವಿದ್ಯಾಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇನ್ನು ಅತ್ಯಂತ ಪ್ರಾಮುಖ್ಯವಾದ ವಿಚಾರ ಎಂದರೆ, ಕರಾವಳಿ ಉದ್ದಕ್ಕೂ ಇರತಕ್ಕಂಥ ಮೀನುಗಾರಿಕಾ ಉದ್ದಿಮೆ. ದಿನದಿಂದ ದಿನಕ್ಕೆ ಕುಂಠಿತವಾಗಿರತಕ್ಕಂಥ ಮೀನುಗಾರಿಕಾ ಉದ್ದಿಮೆ ಇವತ್ತು ಬಹಳಷ್ಟು ಬರಗಾಲ ಎದುರಿಸುವಂಥ ಪರಿಸ್ಥಿತಿಯಾದರೂ ಬೇಕು, ಆ ಮೀನುಗಾರಿಕಾ ಉದ್ದಿಮೆ ಬೇಡ ಎನ್ನುವಂಥ ಪರಿಸ್ಥಿತಿ ಬಂದಿದೆ. ಯಾವ ಪಾಪ ಮಾಡಿ ನಾವು ಮೀನುಗಾರರಾಗಿ ಹುಟ್ಟಿದ್ದೇವೋ ಎಂದು ಮನಸ್ಸಿನ ಚಿತ್ರಣ ನಮಗೆ ಬರುತ್ತಾ ಇದೆ. ಈ ಮಾತನ್ನು ಮತ್ತೆ ಮತ್ತೆ ಏಕೆ ಹೇಳುತ್ತಿದ್ದೇನೆಂದರೆ, ಅನೇಕ ರಾಷ್ಟ್ರೀಕೃತ ಬ್ಯಾಂಕುಗಳು, ಕೆ.ಎಸ್.ಎಫ್.ಸಿ. ಇರಲಿ ಆರ್ಥಿಕ ಸಂಸ್ಥೆಗಳು ಹಣ ಕೊಟ್ಟು ಸ್ವಂತ ಉದ್ಯೋಗ ಮಾಡಲಿಕ್ಕೋಸ್ಕರ ಮೀನುಗಾರಿಕಾ ಜನರನ್ನು ಸಂಘಟಿಸಿ, ಆ ಮೂಲಕ ಅವರಿಗೆ ಪರ್ಸೀನ್ ಬೋಟ್‌ಗಳು ಅಥವಾ ಇನ್ನಿತರ ಲೇಲ್ಯಾಂಡ್ ಬೋಟ್‌ಗಳಿಗೂ ಹಣ ಒದಗಿಸಿಕೊಟ್ಟರು. ನಮ್ಮ ದುರಾದೃಷ್ಟ ಏನೆಂದರೆ, ಸಮುದ್ರಕ್ಕೆ ನಾವು ಏನು ಮೀನುಗಾರಿಕೆಗೆ ಹೋಗುತ್ತೇವೆ, ಅದು ಸಿಗುವುದು ಬಿಡುವುದು ಒಂದು ಲಾಟರಿ ಟಿಕೆಟ್ ಇದ್ದಹಾಗೆ. ಸಿಕ್ಕಿದರೆ ಸಿಕ್ಕಿತು

ಇಲ್ಲವೆಂದರೆ ಇಲ್ಲ. ಇವತ್ತು ಡೀಸೆಲ್ ಬೆಲೆ 3 ರೂಪಾಯಿನಿಂದ ಹಿಡಿದು 12 ರೂಪಾಯಿ 28 ಪೈಸೆವರೆಗೆ ಆಗಿರುತ್ತದೆ. 1984ನೇ ಇಸವಿಯಲ್ಲಿ 3 ರೂಪಾಯಿ ಇರುವಾಗ, ಡೀಸೆಲ್ ಸಬ್ಸಿಡಿ ಎಂದು ಆ ವರ್ಷ, ಬಿಡುಗಡೆ ಮಾಡಿದ್ದರು. ಒಂದು ಯೋಜನೆಯನ್ನು ರೂಪಿಸಿದ್ದೀರಿ. ಡೀಸೆಲ್‌ಗೆ ಸಬ್ಸಿಡಿ ಕೊಡುವ ಬಗ್ಗೆ ಯೋಜನೆ ರೂಪಿಸಿದ್ದೀರಿ. ಅದರಲ್ಲಿ 30 ರಿಂದ 35 ಅಡಿ ಉದ್ದವುಳ್ಳ ಬೋಟುಗಳಿಗೆ 3 ಸಾವಿರ ವಾರ್ಷಿಕ ಡೀಸೆಲ್ ಸಬ್ಸಿಡಿ, 51 ಅಡಿ ಉದ್ದದ ದೋಣಿಗಳಿಗೆ 9 ಸಾವಿರ ಸಬ್ಸಿಡಿಯನ್ನು ಆ ಕಾಲದಲ್ಲಿ ಏನು ಮಾಡಿದ್ದೀರಿ, ಅದನ್ನೇ ಈಗಲೂ ಮುಂದುವರಿಸಿಕೊಂಡು ಹೋಗಿದ್ದೀರಿ. ಇವತ್ತು 12 ರೂಪಾಯಿ 28 ಪೈಸೆ ಕೊಟ್ಟುಕೊಂಡು, ಒಬ್ಬ ಮೀನುಗಾರ ಪರ್ಸೀನ್ ದೋಣಿಯಲ್ಲಿ ರಾತ್ರಿ ಮೀನುಗಾರಿಕೆಗೆ ಹೋಗಬೇಕಾದರೆ, ಅವನು ಎರಡು ದಿವಸ ಸಮುದ್ರದಲ್ಲಿ ಇರಬೇಕಾಗುತ್ತದೆ. ಆ ಪರ್ಸೀನ್ ದೋಣಿಗಳಿಗೆ ಒಂದು ಸಾವಿರ ಲೀಟರ್ ಡೀಸೆಲ್ ಹಾಕಿಕೊಂಡು ಹೋಗಬೇಕಾಗುತ್ತದೆ. ಈ ರೀತಿ ಹಾಕಿಕೊಂಡು ಹೋಗಿ ಮೀನುಗಾರಿಕೆ ಮಾಡಿಕೊಂಡು ಹೊರಕ್ಕೆ ಬಂದರೆ, ಅಲ್ಲಿ ಮೀನು ಸಿಕ್ಕುವುದಿಲ್ಲ, ಒಂದುವೇಳೆ ಮೀನು ಸಿಕ್ಕಿ ಬಂದರೆ ಕರಂಟ್ ಇಲ್ಲದೇ, ಐಸ್ ಪ್ಲಾಂಟ್‌ನವನ ಹತ್ತಿರ ಐಸ್ ಇಲ್ಲದೇ ಅದನ್ನು ಮತ್ತೆ ಸಮುದ್ರಕ್ಕೆ ಎಸೆಯುವಂಥ ಪರಿಸ್ಥಿತಿಯಾಗಿದೆ. ಇದರಿಂದಾಗಿ ಸುಮಾರು 6 ಸಾವಿರ ಮೆಕನೈಸ್ಡ್ ಬೋಟು ಇರತಕ್ಕಂಥ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಗಳಲ್ಲಿ ಸುಮಾರು 3 ಸಾವಿರ 50 ಪರ್ಸೆಂಟ್ ಪರ್ಸೀನ್ ಬೋಟ್‌ಗಳು ದಡ ಸೇರಿವೆ. ಮೀನುಗಾರಿಕೆಗೆ ಹೋಗಲಿಕ್ಕೆ ನಮ್ಮ ಹತ್ತಿರ ದುಡ್ಡು ಇಲ್ಲ. ಡೀಸೆಲ್ ಕೊಂಡುಕೊಳ್ಳುವುದಕ್ಕೆ ನಮ್ಮ ಹತ್ತಿರ ದುಡ್ಡು ಇಲ್ಲ. ಒಂದುವೇಳೆ ದುಡ್ಡ ಇಟ್ಟುಕೊಂಡು ಬಂದರೂ ಕೂಡ ಇಲ್ಲಿಯ ಪರಿಸ್ಥಿತಿ ಬೇರೆ. ಹಾಗಾಗಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು, ಕೆ.ಎಸ್.ಎಫ್.ಸಿ. ಸಂಸ್ಥೆ, ಆರ್ಥಿಕ ಸಂಸ್ಥೆಗಳೆಲ್ಲಾ ಸೇರಿಕೊಂಡು, ಆ ದೋಣಿಗಳನ್ನು ಜಪ್ತಿ ಮಾಡುವಂಥ ಪರಿಸ್ಥಿತಿ ಬಂದಿದೆ. ಪ್ರತಿಯೊಬ್ಬ ಮೀನುಗಾರನೂ ಕಣ್ಣೀರಿನ ಕಡಲಲ್ಲಿ ತೇಲಾಡುತ್ತಿದ್ದಾನೆ. ಅವರೆಲ್ಲಾ ಒಟ್ಟಾಗಿ ಸೇರಿಕೊಂಡು ನಮ್ಮನ್ನು ಭಿಕ್ಷೆ ಬೇಡುವಂಥ ರೀತಿಯಲ್ಲಿ ಬೇಡುತ್ತಿದ್ದಾರೆ. ನಮಗೆ ಡೀಸಲ್‌ಗೆ ಸಬ್ಸಿಡಿ ಹೆಚ್ಚಿಸಿಕೊಡಿ. ನಮಗೆ ಡೀಸೆಲ್ ಸಬ್ಸಿಡಿ ಬೇಡ, ಮಾರಾಟ ಕರವನ್ನು ದಯವಿಟ್ಟು ಎರಡು ವರ್ಷಗಳವರೆಗೆ, ರಿಯಾಯಿತಿ ಕೊಡಿ ಎಂದು ನಿಮ್ಮ ಹತ್ತಿರ ಕೈಜೋಡಿಸಿ ಕೇಳುತ್ತಾರೆ. ಇವತ್ತು ಮಾರಾಟ ಕರವನ್ನು ಎರಡು ವರ್ಷಗಳವರೆಗೆ ಬಿಟ್ಟುಕೊಡಬೇಕು. ಯಾವ ಮೀನುಗಾರಿಕಾ ದೋಣಿಗಳು ಬಳಸತಕ್ಕ ಡೀಸೆಲ್ ಇದೆ, ಆ ಡೀಸೆಲ್‌ಗೆ ಮಾತ್ರ ಮಾರಾಟ ಕರವನ್ನು ಮನ್ನಾ ಮಾಡುವಂತೆ 1998-99ರ ಮುಂಗಡಪತ್ರದಲ್ಲಿ ದಯವಿಟ್ಟು ಘೋಷಣೆ ಮಾಡಬೇಕೆಂದು ನಾನು ಕಳಕಳಿಯಿಂದ ವಿನಂತಿಸುತ್ತೇನೆ. ಇದರಲ್ಲಿ ಯಾವುದೇ ರೀತಿಯ ದುರುಪಯೋಗವಾಗುವುದಿಲ್ಲ. ಏಕೆಂದರೆ, ಮೀನುಗಾರಿಕಾ ಜನರಿಂದಲೇ ನಡೆಸುವ ಸಹಕಾರಿ ಸಂಸ್ಥೆಗಳ ಮೂಲಕ ಪೆಟ್ರೋಲ್ ಪಂಪ್‌ಗಳು, ಡೆಸೆಲ್ ಪಂಪ್‌ಗಳು ಇವೆ. ಆ ಡೀಸೆಲ್ ಪಂಪುಗಳ ಮೂಲಕವೇ ಈ ಡೀಸೆಲ್‌ನ್ನು, ಮಾರಾಟ ತೆರಿಗೆ ಇಲ್ಲದಂಥ ಡೀಸೆಲ್‌ನ್ನು ಕೊಟ್ಟರೆ, ಖಂಡಿತವಾಗಿಯೂ ಇದರಲ್ಲಿ ಯಾವುದೇ ರೀತಿಯ

ದುರುಪಯೋಗವಾಗುವುದಿಲ್ಲವೆಂಬ ಮಾತನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು: ತಾವು ಮಾತನಾಡಲು ನಿಂತು 40 ನಿಮಿಷವಾಯಿತು, ಬೇಗ ಮುಗಿಸಬೇಕು. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಯು.ಆರ್.ಸಭಾಪತಿ: ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತು ಮಾತ್ರ ನನಗೆ ಸಂತೋಷ ತರುತ್ತಿದೆ. ಮೀನುಗಾರಿಕಾ ಇಲಾಖೆಯಲ್ಲಿ 5 ಸಾವಿರ ಮನೆಗಳ ನಿರ್ಮಾಣದ ಬಗ್ಗೆ ಹೇಳಿದ್ದೀರಿ. ನಿಜವಾಗಿಯೂ ಇದನ್ನು ನಾನು ಪ್ರಶ್ನಿಸಬೇಕು. ಆದರೆ, ಈ 5 ಸಾವಿರ ಮನೆಗಳು ಸಾಕಾಗುವುದಿಲ್ಲ. ನಮಗೆ ಕನಿಷ್ಠ 10 ಸಾವಿರ ಮನೆಗಳನ್ನು ಕೊಟ್ಟರೆ ಬಹಳ ಉಪಕಾರವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ ಅದರಲ್ಲಿಯೂ ನಮ್ಮ ಕರಾವಳಿ ಮೀನುಗಾರರ ಪರಿಸ್ಥಿತಿ, ಕರಾವಳಿ ನಿಯಂತ್ರಣ ವಲಯ ಎಂದು ಹೇಳುವಂತಾದ್ದು ಸಿ.ಆರ್.ಜಡ್, ಸಿ.ಆರ್.ಜಡ್-2 ಎಂದು ಕೇಂದ್ರಸರ್ಕಾರ ಪ್ರಕಟಗೊಳಿಸಿದ್ದಾರೆ. ಇದರಲ್ಲಿ ನಾವು ಬಹಳಷ್ಟು ತೊಂದರೆಗೆ ಈಡಾಗಿದ್ದೇವೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕರಾವಳಿಯಲ್ಲಿ ಎಷ್ಟೋ ವರ್ಷಗಳಿಂದ 50-60 ವರ್ಷಗಳಿಂದ ಕರಾವಳಿಯ ಬದಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿರತಕ್ಕ ಜನರಿಗೆ, ಇವತ್ತಿನವರೆಗೆ ಹಕ್ಕುಪತ್ರ ಒದಗಿಸುವುದಕ್ಕಾಗಿಲ್ಲ. ಕರಾವಳಿ ನಿಯಂತ್ರಣ ವಲಯ, 1, 2 ಮತ್ತು 3 ಎಂದು ವಿಂಗಡಿಸಿ, ಅದರಲ್ಲಿ ಕರಾವಳಿ ನಿಯಂತ್ರಣ ವಲಯ-1ರಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕರಾವಳಿಯನ್ನು ಒಳಪಡಿಸಿದರೆ, ಯಾರಿಗೂ ಅಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾರಿಗೂ ಕರಾವಳಿಯಲ್ಲಿ ಮೀನುಗಾರಿಕಾ ಉದ್ದಿಮೆಯನ್ನು ಮಾಡುವುದಕ್ಕೆ ಬರುವುದಿಲ್ಲ. ಆದರೆ, ನಿಯಮಗಳಿಗನುಸಾರವಾಗಿ, ಕರಾವಳಿ ನಿಯಂತ್ರಣ ವಲಯ-2 ಏನಿದೆ, ಅದರಲ್ಲಿ ನಿಯಮವೇ ಇದೆ. ಎಲ್ಲೆಲ್ಲಿ ಗುಂಪು ಮನೆಗಳು ಇವೆಯೋ, ಎಲ್ಲೆಲ್ಲಿ ನಗರ ಸಭಾ ಪ್ರದೇಶಗಳಿವೆಯೋ, ಆ ಮನೆಗಳಿಗೆ ಹಕ್ಕುಪತ್ರಗಳನ್ನು, ಆ ಮನೆಗಳನ್ನು ಆರ್.ಸಿ.ಸಿ.ಯಾಗಿ ಪರಿವರ್ತನೆ ಮಾಡುವುದಕ್ಕೆ ಅಥವಾ ಅಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ಕಟ್ಟಲು ನಿಯಮಾವಳಿಯಲ್ಲಿ ಅವಕಾಶ ಇದೆ. ನೀವು ಕಂದಾಯ ಇಲಾಖೆಯ ನಕಾಶೆಯನ್ನು ದಯವಿಟ್ಟು ನೋಡಲು ಹೋಗಬೇಡಿ. ಕಂದಾಯ ಇಲಾಖೆಯ ನಕಾಶೆಯಲ್ಲಿ ಈ ಮೀನುಗಾರರಿಗೆ ಹಕ್ಕುಪತ್ರವನ್ನು ಕೊಡದೇ ಇರುವುದರಿಂದಾಗಿ ಅಲ್ಲಿ ಎಲ್ಲಾ ಖಾಲಿ ಭೂಮಿ ಇದೆಯೆಂದು ನಕಾಶೆ ತೋರಿಸುತ್ತಿದೆ. ಈ ತಾಂತ್ರಿಕವಾದಂಥ ತೊಡಕು ಏನಿದೆ, ಇದನ್ನು ಸಿ.ಆರ್.ಜಡ್-1 ಮತ್ತು 2 ಎಂದು ಹೇಳುವಂಥ ಇದನ್ನು ಸರ್ವೆ ಮಾಡುವುದಕ್ಕೆ ಪರಿಸರ ಇಲಾಖೆಯ ಕಾರ್ಯದರ್ಶಿಗಳು ಬಂದಾಗ, ನಾನು ಜಿಲ್ಲಾಧಿಕಾರಿಗಳ ಮುಖೇನ ಇದನ್ನು ಸ್ಪಷ್ಟೀಕರಿಸಿದ್ದೇನೆ. ದಯವಿಟ್ಟು ಈ ಕರಾವಳಿ ಪ್ರದೇಶದಲ್ಲಿರತಕ್ಕ ಗುಂಪು ಮನೆಗಳು ಕಂದಾಯ ಇಲಾಖೆಯ ನಕಾಶೆಯಲ್ಲಿ ಇಲ್ಲದಿದ್ದರೂ ಕೂಡ, ಅವರೇನು ಹೆಂಚುಗಳನ್ನು ಹಾಕಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರಿಗೆ ಮನೆ ಕಟ್ಟಲಿಕ್ಕೆ ಅವಕಾಶ ಕೊಡಬೇಕು. ಅವರಿಗೆ ಹಕ್ಕುಪತ್ರ ಕೊಡಬೇಕು,

ಅವರಿಗೆ ರೇಷನ್ ಕಾರ್ಡ್ ಕೊಡಬೇಕೆನ್ನುವಂಥ ಮಾತನ್ನು ಹೇಳುವುದಲ್ಲದೆ, ಅವರಿಗೆ ಮೂಲಭೂತವಾದಂಥ ಎಲ್ಲಾ ಸೌಕರ್ಯಗಳನ್ನೂ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದಾಗಿ ಸುಮಾರು 3 ಲಕ್ಷ ಜನ ಮೀನುಗಾರರು ಇವತ್ತು ಸಂದಿಗ್ಧತೆಗೆ ಒಳಗಾಗಿದ್ದಾರೆ. ಆದರೆ, ದೊಡ್ಡ ದೊಡ್ಡ ಬಂಡವಾಳಶಾಹಿಗಳು ಈ ಸಂದಿಗ್ಧತೆಗೆ ಒಳಗಾಗಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಮುರುಡೇಶ್ವರಕ್ಕೆ ಹೋದರೆ, ಅಲ್ಲೊಂದು ಗೆಸ್ಟ್‌ಹೌಸ್ ಇದೆ. ಆ ಗೆಸ್ಟ್‌ಹೌಸ್ ಸಮುದ್ರದ ಮೇಲೆಯೇ ಇದೆ. ಅವರಿಗೆ ಸಿ.ಆರ್.ಜಡ್-1 ಅಥವಾ 2 ಅಪ್ಲೈ ಆಗಲಿಲ್ಲ. ಏಕೆಂದರೆ, ಆ ಗೆಸ್ಟ್‌ಹೌಸ್‌ನಲ್ಲಿ ಮಂತ್ರಿಗಳು, ಐ.ಎ.ಎಸ್. ಅಧಿಕಾರಿಗಳು ವಾಸ್ತವ್ಯ ಮಾಡುತ್ತಿದ್ದಾರೆ. ಅಲ್ಲಿ ಇವರಿಗೆ ಅಪ್ಲೈ ಆಗುವುದಿಲ್ಲ. ಬಡವರಿಗೆ ಹಕ್ಕುಪತ್ರ ಕೊಡಬೇಕೆಂದು ಹೇಳಿದಕೂಡಲೇ ಈ ಕರಾವಳಿ ನಿಯಂತ್ರಣ ವಲಯವನ್ನು ಈ ಅಧಿಕಾರಿಗಳೇ ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಹತ್ತಿರ ಕೈಜೋಡಿಸಿ ಬೇಡುತ್ತಿದ್ದೇನೆ. ನೀವು ಉಡುಪಿಗೆ ಬಂದಾಗ ಒಂದು ವಿಷಯವನ್ನು ಘೋಷಣೆ ಮಾಡಿದಿರಿ. ಆ ದಿವಸ ಎಲ್ಲಾ ಅಧಿಕಾರಿಗಳೂ ಇದ್ದರು. ಜಿಲ್ಲೆಯ ಪ್ರಗತಿ ಪರಿಶೀಲನಾ ಸಮಿತಿಯ ಸಭೆಗೆ ಬಂದಾಗ, ನಾನು ಈ ಬಗ್ಗೆ ಹೇಳಿದೆ. ಕರಾವಳಿ ಪ್ರದೇಶದಲ್ಲಿ ವಾಸ ಮಾಡುವ ಎಲ್ಲಾ ಮೀನುಗಾರ ಜನಾಂಗದವರಿಗೆ, ಅವರಿಗೆ ದಂಡನಾ ಶುಲ್ಕ ಇಲ್ಲದೇ ನೀವು ಹಕ್ಕುಪತ್ರವನ್ನು ಕೊಡಬೇಕೆಂಬುದನ್ನು ಹೇಳಿದ್ದೆ. ನೀವು ಅದನ್ನು ಘೋಷಣೆ ಕೂಡ ಮಾಡಿದ್ದಿರಿ. ದಂಡನಾ ಶುಲ್ಕವಿಲ್ಲದೆ ಅವರಿಗೆ ಹಕ್ಕುಪತ್ರ ಕೊಡಿ ಎಂದು ಅಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ನೀವು ಹೇಳಿದಿರಿ. ಆದರೆ, ಇವತ್ತಿನವರೆಗೂ ಕೂಡ ಆ ಕಡತ ವಿಲೇವಾರಿ ಆಗಲಿಲ್ಲ. ಇವತ್ತಿನವರೆಗೂ ಆ ಕಡತದ ಬಗ್ಗೆ ಏನು ಮಾಡಿದರು ಎಂದು ನಮಗೆ ಗೊತ್ತಿಲ್ಲ. ಅಕ್ರಮ ಸಕ್ರಮ, ನಗರಸಭೆಯ ಪ್ರದೇಶ ವ್ಯಾಪ್ತಿಯಲ್ಲಿ ಬರತಕ್ಕ ಏನು ಅರ್ಜಿ ನಮೂನೆ 50ರ ಮೂಲಕ ಕೊಟ್ಟಂಥ 30 ಸೆಂಟ್ಸ್, 25 ಸೆಂಟ್ಸ್‌ಗಳ ಮೂಲಕ 50-60 ವರ್ಷಗಳಿಂದ ಕುಳಿತಿರತಕ್ಕಂಥ ಜನ ಯಾರಿದ್ದಾರೆ, ಅವರು ಅಕ್ರಮ ಸಕ್ರಮ ಸಮಿತಿಗೆ ಅರ್ಜಿ ಹಾಕಿದಾಗ, ಇದು ನಗರಸಭೆಯ ವ್ಯಾಪ್ತಿಗೆ ಬರುತ್ತದೆಂದು ಹೇಳಿ ಆ ಅರ್ಜಿಗಳನ್ನೆಲ್ಲಾ ತಿರಸ್ಕರಿಸಲಾಯಿತು, ಅದನ್ನೂ ಕೂಡ ನಾನು ಪ್ರಗತಿ ಪರಿಶೀಲನಾ ಸಭೆಯಲ್ಲಿ ಹೇಳಿದೆ. ನಗರ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ ಮನೆಗಳು, ಅಕ್ರಮ ಸಕ್ರಮ ಸಮಿತಿಯ ಮೂಲಕ ಕೊಟ್ಟಂಥ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಬೇಕೆಂದು ನಾನು ಕೇಳಿಕೊಂಡೆ. ಅದರ ಬಗ್ಗೆಯೂ ಕೂಡ ಯಾವುದೇ ಸರ್ಕಾರಿ ಆದೇಶ, ನೀವು ಘೋಷಣೆ ಮಾಡಿ 6 ತಿಂಗಳಾದರೂ ಕೂಡ ಇವತ್ತಿವನೆಗೆ ಆ ಘೋಷಣೆ ಕಾರ್ಯರೂಪಕ್ಕೆ ಬರಲಿಲ್ಲ. ಇವತ್ತು ಈ ಸದನ ಪ್ರಾರಂಭದ ದಿನ. ಅಲೆಯೂರು ಮತ್ತು ಎಂಭತ್ತು ಬೆಡಗಬೆಟ್ಟು ಪ್ರದೇಶಗಳಲ್ಲಿ ಕಂದಾಯ ಇಲಾಖೆಯಲ್ಲಿ ಹಕ್ಕುಪತ್ರ ಕೊಟ್ಟವರನ್ನು ಎಬ್ಬಿಸಿ, ಅದು ಅರಣ್ಯ ಇಲಾಖೆಯ ಭೂಮಿ ಎನ್ನುವಂಥ ಹಗರಣ ಏನಿತ್ತು, ಈ ಸದನದಲ್ಲಿ ವಿರೋಧಪಕ್ಷದ ನಾಯಕರು ನಾವು ಸಾಕಷ್ಟು ಸಲ ಚರ್ಚೆ ಮಾಡಿದ್ದೇವೆ. ಸಾಕಷ್ಟು ಸಲ ಪ್ರಗತಿ ಪರಿಶೀಲನೆ ಸಭೆಯಲ್ಲಿ

ಚರ್ಚೆ ಮಾಡಿದ್ದೇವೆ. ನೀವು ಕೂಡ ಪ್ರಗತಿ ಪರಿಶೀಲನೆ ಸಭೆಯಲ್ಲಿ ನಮಗೆ ಆಶ್ವಾಸನೆ ಕೊಟ್ಟಿದ್ದೀರಿ. ಇದನ್ನು 15 ದಿವಸದೊಳಗೆ ಇತ್ಯರ್ಥ ಮಾಡುತ್ತೇವೆ. ನಮ್ಮ ಅರಣ್ಯ ಇಲಾಖೆಯ ಮಂತ್ರಿಗಳು ಅವರು ಇಲ್ಲ, ಅವರು ಓಡಿ ಬಿಟ್ಟಿದ್ದಾರೆ, ಸದನ ಮುಗಿದ ನಂತರ ನಾನು ಸಭೆಯನ್ನು ಕರೆದು ಮಾಡುತ್ತೇನೆಂದು ಹೇಳಿದವರು, ಅವರು ಮಂತ್ರಿಯ ಪದವಿಗೆ ರಾಜೀನಾಮೆ ಕೊಟ್ಟು ಹೋಗಿಬಿಟ್ಟರು. ನಮ್ಮ ಗತಿ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ, ದಯಮಾಡಿ ಆ ಕರಾವಳಿಯ ಪ್ರದೇಶದಲ್ಲಿರತಕ್ಕಂಥ ಬಡ ಜನಾಂಗ ಯಾರು ಇದ್ದಾರೆ, ಅವರು ಮೀನುಗಾರರ ಜನಾಂಗ ಇರಲಿ, ಅಥವಾ ಇನ್ಯಾರೇ ಇರಲಿ, 30-40 ವರ್ಷಗಳಿಂದ ಆ ಪ್ರದೇಶದಲ್ಲಿರತಕ್ಕಂಥ ಜನ, ಅವರಿಗೆ ಹಕ್ಕುಪತ್ರವನ್ನು ಕೊಟ್ಟು, ದಂಡನಾ ಶುಲ್ಕವನ್ನು ವಿಧಿಸಿದ್ದರೆ ಅದನ್ನು ಮನ್ನಾ ಮಾಡಿ, ನಿಮ್ಮ ಮೂಲಭೂತ ಸೌಕರ್ಯ ಒದಗಿಸುವುದು ಏನು ಇದೆ ಆ ಭರವಸೆಯನ್ನು ಈಡೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇರೀತಿ ಅಲೆಯೂರು ಮತ್ತು ಎಂಬತ್ತು ಬೆಡಗ ಬೆಟ್ಟಿನ 1800 ನಿವೇಶನದಾರರಿಗೆ, ಕೇವಲ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯ ಜಗಳಾಟದಿಂದ ಅವರನ್ನು ಬೀದಿಗೆ ಹಾಕಿದ್ದೀರಿ. ಇದರ ಬಗ್ಗೆ ಕೂಡ ನಾವು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸಾಕಷ್ಟು ತರಾಟೆಗೆ ತೆಗೆದುಕೊಂಡಿದ್ದೇವೆ. ಕಂದಾಯ ಇಲಾಖೆಯ ಅಧಿಕಾರಿಗಳನ್ನು ನಾವು ತರಾಟೆಗೆ ತೆಗೆದುಕೊಂಡರು ಕೂಡ, ಇದರ ಬಗ್ಗೆ ಇನ್ನು ಇತ್ಯರ್ಥವಾಗಲಿಲ್ಲ. 6 ತಿಂಗಳ ಹಿಂದೆ ನೀವು ಮಂಗಳೂರಿಗೆ ಪ್ರಗತಿ ಪರಿಶೀಲನಾ ಸಭೆಗೆ ಬಂದಾಗ ನೀವು ಹೇಳಿದ್ದೀರಿ. ಇನ್ನು 15 ದಿವಸದೊಳಗೆ ನಿಮ್ಮ ಇಲಾಖೆಯ ಗಲಾಟೆಯನ್ನು ಮುಕ್ತಾಯ ಮಾಡಿ, ನೀವು ಅವರಿಗೆ ಹಕ್ಕುಪತ್ರ ಕೊಡಿಸುವ ಕೆಲಸವನ್ನು, ಈ ಎರಡು ಜಿಲ್ಲಾಧಿಕಾರಿಗಳಿಗೆ ಹೊಣೆಗಾರರನ್ನಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಇವತ್ತಿನವರೆಗೂ ಈ ಕಡತ ವಿಲೇವಾರಿ ಆಗಲಿಲ್ಲ. ಈ ಇಲಾಖೆಯ ಕಡತದ ಬಗ್ಗೆ ಪ್ರಗತಿಯೂ ಆಗಲಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ನಾನು ಬಾಲಕಾರ್ಮಿಕರ ಬಗ್ಗೆ ಬಹಳಷ್ಟು ಹೇಳಬೇಕಾಗಿತ್ತು, ಆದರೆ ಇವತ್ತು ಬಾಲಕಾರ್ಮಿಕರ ಏನು ಕಾರ್ಮಿಕತನ ಇದೆ ಅದು ಸುಪ್ರೀಮ್ ಕೋರ್ಟ್ ಕಾನೂನು ವಿರೋಧಿ ಎಂದು ಹೇಳಿ ಘೋಷಣೆ ಮಾಡಿದರೂ ಕೂಡ, ಇವತ್ತು ದಿನದಿಂದ ದಿನಕ್ಕೆ ಬಾಲಕಾರ್ಮಿಕರ ಸಂಖ್ಯೆ ಜಾಸ್ತಿಯಗುತ್ತಾ ಹೋಗುತ್ತಿದೆ. ಅನೇಕ ಮಂದಿ ನಮ್ಮ ಶಾಸಕರ ಭವನದ ಕ್ಯಾಂಟೀನ್‌ನಲ್ಲಿ ಇರುವುದನ್ನು ನಿಮ್ಮ ಗಮನಕ್ಕೆ ತೋರಿಸಿದ್ದೇನೆ. ಎಷ್ಟು ವಿಪರ್ಯಾಸ ಇದೆ ಎಂದು ಹೇಳುವುದಾದರೆ ಆ ಸಣ್ಣ ಸಣ್ಣ ಮಕ್ಕಳು ಹೊಟ್ಟೆಗಾಗಿ ಬಂದವರಿಗೆ, ಅವರಿಗೆ ಸರಿಯಾದ ಸಂಬಳ ಕೊಡದೆ, ಏನು ಅಲ್ಲಿ ಇಲ್ಲಿ ಬೇಯಿಸಿದ ಬಿಸಾಡಿದ ಅನ್ನದ ತುತ್ತುಗಳನ್ನು ತಿಂದು ಆ ರೋಗರುಜಿನಗಳಿಂದ ಬಳಲುವವರು ಎಷ್ಟು ಜನರಿದ್ದಾರೆ. ಸುಮಾರು 12 ಲಕ್ಷ ಬಾಲಕಾರ್ಮಿಕರಿಗೆ ಏನು ಐಡೆಂಟಿಫಿಕೇಷನ್ ಮಾಡಿದ್ದಾರೆ, ಅದರ ಬಗ್ಗೆ ನಾನು ಇಲ್ಲಿ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಮಂತ್ರಿಗಳು

ನನಗೆ ಉತ್ತರವನ್ನು ಕೊಟ್ಟರು, ಅದಕ್ಕೆ ಯೋಜನೆಗಳನ್ನು ಸಿದ್ಧಪಡಿಸಿದ್ದೇವೆ. ಅದಕ್ಕೆ ಕಲ್ಯಾಣ ನಿಧಿಯನ್ನು ಮಾಡಿದ್ದೇವೆ ಎಂದು ಹೇಳಿದಿರಿ. ಏನು ಕಲ್ಯಾಣ ನಿಧಿ? ಬಾಲ ಕಾರ್ಮಿಕರು ಎಲ್ಲೆಲ್ಲಿ ಇದ್ದಾರೋ ಅವರನ್ನು ಹೊರಗೆ ತಂದು ಅವರಿಗೆ ಯೋಗ್ಯವಾದ ಯೋಜನೆಯನ್ನು ಕೊಡಬೇಕೇ ವಿನಃ ಇನ್ನಷ್ಟು ಹೋಟೇಲ್‌ಗಳಲ್ಲಿ ಅವರನ್ನೂ ದುಡಿಯಲಿಕ್ಕೆ ಹಾಕಿದ್ದೀರಿ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ದಯಮಾಡಿ ನೋಡಿ, ಆ ಬಾಲಕಾರ್ಮಿಕರು ಮುಂದಿನ ಯುವ ಪೀಳಿಗೆ, ನಮ್ಮ ಮಕ್ಕಳು ಇಂಗ್ಲೀಷ್ ಮೀಡಿಯಂ ಭಾಷೆಯಲ್ಲಿ ಓದುತ್ತಿದ್ದಾರೆ, ಅವರಿಗೆ ಎರಡು ಬೂಟು ಸೂಟು ಕೊಡುವುದಕ್ಕೆ ಸಮರ್ಥರಾಗಿದ್ದೇವೆ. ಆದರೆ ನಮಗೆ ಮತ ಕೊಟ್ಟು ಕಳುಹಿಸಿದ ಆ ಒಬ್ಬ ಬಡಪಾಯಿ ಮಗನಿಗೆ ಹೊಟ್ಟೆಗೆ ಇಲ್ಲದೆ ನಗರ ಪ್ರದೇಶಗಳಲ್ಲಿರುವ ಹೋಟೇಲ್‌ಗಳಿಗೆ ತಟ್ಟೆ ತೊಳೆಯಲು ಕಳುಹಿಸುತ್ತಾರೆ, ಅಲ್ಲಿ ಧಣಿಗಳು ಕೊಡುವ ಚಾಟಿ ಏಟನ್ನು ಅನುಭವಿಸಿಕೊಂಡು ಸಣ್ಣ ಪುಟ್ಟ 5-6 ವರ್ಷದ ಮಕ್ಕಳು ನರಳುವುದನ್ನು ನಾನು ಇನ್ನು ಸ್ವಾತಂತ್ರ್ಯ ನಂತರ 50ನೇ ವಾರ್ಷಿಕ ವರ್ಷವನ್ನು ಆಚರಿಸುವಾಗ ನಾವು ಅದನ್ನು ನೋಡಬೇಕೇ? ಅದಕ್ಕಾಗಿ ಈ ಬಾಲಕಾರ್ಮಿಕ ರಕ್ಷಣೆಗೆ ಈ ಸರ್ಕಾರ ಇರಬೇಕೆನ್ನುವ ಮಾತನ್ನು ಹೇಳುತ್ತೇನೆ. ಸ್ವಾತಂತ್ರ್ಯ ನಂತರ ಈ 50ನೇ ವರ್ಷದ ಸಂದರ್ಭದಲ್ಲಿಯಾದರೂ ಅಬಕಾರಿ ನೀತಿಯಲ್ಲಿ ಬದಲಾವಣೆಯಾಗಬಹುದೆಂದು ಎನಿಸಿದೆ. ನೀವು ಈ ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತಪಡಿಸಿದಿರಿ ಸಾರಾಯಿ ಮಾರಾಟವನ್ನು ನಿಷೇಧ ಮಾಡುತ್ತೇವೆ ಎನ್ನುವಂಥ ವಚನ ಎಲ್ಲಿ ಹೋಯಿತು. ಎಲ್ಲಿ ನಿಮ್ಮ ಪ್ರಾಮಾಣಿಕತನ, ಎಲ್ಲಿ ನಿಮ್ಮ ದಿಟ್ಟತನ? ಸಾರಾಯಿಯನ್ನು ನಿಷೇಧ ಮಾಡುತ್ತೇವೆಂದು ಗಂಟಾಘೋಷವಾಗಿ ಹೇಳಿದವರು ಈಗ ಮತ್ತೆ ಸಾರಾಯಿಯ ರಕ್ಷಣೆಗೆ ತೊಡಗಿದ್ದೀರಾ? ಮತ್ತೆ ಅವರಿಗೆ ಅಂಗಡಿಗಳನ್ನು ಕೊಟ್ಟು ಹೊಸ ರೀತಿಯಲ್ಲಿ ಸಾರಾಯಿ ಮಾಡಲಿಕ್ಕೆ ಶುರು ಮಾಡಿದ್ದೀರಾ? ಆದರೆ ಸಾರಾಯಿ ಮಾರಾಟ ನಿಷೇಧ ಎಂದು ಘೋಷಣೆಯನ್ನು ಏಕೆ ಮಾಡಿದಿರಿ? ಗಂಟಾಘೋಷವಾಗಿ ಇದೇ ಸದನದಲ್ಲಿ ನೀವು ಹೇಳಿದಿರಲ್ಲಾ, ರಾಜ್ಯಪಾಲರು ಓದಿದರಲ್ಲಾ, ಹಾಗಾದರೆ ಇದಕ್ಕೆ ಏನು ಮರ್ಯಾದೆ ಬಂತು? ಈ ಸದನಕ್ಕೆ ಏನು ಮರ್ಯಾದೆ ಬಂತು? ನಮ್ಮ ರಾಜ್ಯಪಾಲರಿಗೆ ಏನು ಮರ್ಯಾದೆ ಬಂತು? ಅಬಕಾರಿ ಇಲಾಖೆಯ ಒಟ್ಟಿಗೆ ಒಂದು ನಾರ್ಕೊಟಿಕ್ ವಿಭಾಗ ಇದೆ. ಪ್ರತಿ ಸದನದಲ್ಲಿ ಹೇಳಿಕೊಂಡು ಬಂದೆ ಮಾದಕ ದ್ರವ್ಯದ ವ್ಯಸನಿಗಳು ಇವತ್ತು 21 ವರ್ಷದ ಸಣ್ಣ ಹುಡುಗರಾಗಿದ್ದಾರೆ. 14-21 ವರ್ಷದವರೆಗಿನ ಅದರಲ್ಲೂ ವಿದ್ಯಾರ್ಥಿಗಳು ಈ ಮಾದಕ ದ್ರವ್ಯಗಳ ವ್ಯಸನಿಗಳಾಗಿದ್ದಾರೆ. ಇವತ್ತು ಮಾದಕ ದ್ರವ್ಯವನ್ನು ಎಷ್ಟು ಪತ್ತೆ ಹಚ್ಚಿದ್ದೀರಾ ಎಂದು ಸರ್ಕಾರಕ್ಕೆ ಕೇಳಿದರೆ, ಮಾದಕ ದ್ರವ್ಯ ಪತ್ತೆ ಹಚ್ಚಲಿಲ್ಲ, ಪತ್ತೆ ಹಚ್ಚಿದವರನ್ನು ನಾವು ಬಿಟ್ಟಿದ್ದೇವೆಂದು ನನಗೆ ಉತ್ತರ ಬಂದಿದೆ ನಾನು ತೋರಿಸುತ್ತೇನೆ. ಹಾಗಾದರೆ ಈ ನಾರ್ಕೊಟಿಕ್ ವಿಭಾಗ ಅನ್ನುವುದಾದರೆ ಏತಕ್ಕೆ ಬೇಕಾಗಿದೆ. ಇವತ್ತಿನ ದಿವಸ ಕೋಟ್ಯಾಂತರ ಮಾದಕ ದ್ರವ್ಯ ಬೇರೆ ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಪ್ರವಾಹೋಪಾದಿಯಲ್ಲಿ ಬರುತ್ತಿದೆ. ಈ ನಾರ್ಕೊಟಿಕ್ ವಿಭಾಗ ಆಗಲಿ,

ಪೊಲೀಸ್ ಇಲಾಖೆಯಾಗಲಿ ಕಣ್ಣು ಮುಚ್ಚಿಕೊಂಡು ಎಷ್ಟೋ ವಿದ್ಯಾರ್ಥಿಗಳು ಮಾದಕ ದ್ರವ್ಯದ ವ್ಯಸನಿಯಾಗಿ ಮರಣ ಪಡೆಯುವಂಥ, ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಬಂತು. ಇದನ್ನು ಪತ್ತೆ ಹಚ್ಚಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿ ಎಂದು ನಾವು ಪ್ರತಿ ಸಭೆ ಸಭೆಗಳಲ್ಲಿ ಕೇಳಿದ್ದಕ್ಕೆ ನಮಗೆ ಏನು ನಿಮ್ಮ ಪ್ರಾಮಾಣಿಕತನದ, ದಿಟ್ಟತನದ ಉತ್ತರ ಬಂತು ಹೇಳಿ, ಅದಕ್ಕಾಗಿ ನೀವು ಉತ್ತರಿಸಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಈ ಸಂದರ್ಭದಲ್ಲಿ ಯುವಜನ ಕ್ರೀಡಾ ಇಲಾಖೆಯ ಪ್ರಗತಿಯ ಬಗ್ಗ ನೀವು ಇಲ್ಲಿ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟವನ್ನು ಇಲ್ಲಿ ನಡೆಸಿದ್ದೇವೆಂದು ಹೇಳುವಂತಹ ಮತ್ತು ಬೆನ್ನುಚಪ್ಪರಿಸುವಂಥ ಕೆಲಸವನ್ನು ಮಾಡಿದಿರಿ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಯುವಜನ ಕ್ರೀಡಾ ಸಂಘಟನೆಗಳಿಗೆ, ತಾಲ್ಲೂಕು ಮಟ್ಟದ ಕ್ರೀಡೋತ್ಸವ ನೀವು ಮಾಡುವುದಿದ್ದರೆ, ನಿಮ್ಮ ವಿದ್ಯಾ ಇಲಾಖೆಯವರು, ಯುವಜನ ಇಲಾಖೆಯವರು ಕೇವಲ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಕನಿಷ್ಟ 50-60 ಸಾವಿರ ರೂಪಾಯಿಗಳು ಬೇಕಾದಂಥ ತಾಲ್ಲೂಕು ಮಟ್ಟದ ಕ್ರೀಡೋತ್ಸವಕ್ಕೆ ನಾವು ಸಾರ್ವಜನಿಕರು ಶಾಸಕರು ಚುನಾವಣೆಯ ಪ್ರತಿನಿಧಿಗಳು ನಾವು ಬೇಡಿಕೊಂಡು ಈ ಯುವಜನ ಕ್ರೀಡೋತ್ಸವವನ್ನು ಮಾಡಬೇಕೇ? ಎಷ್ಟೋ ಕ್ರೀಡಾ ಆಸಕ್ತಿಯುಳ್ಳವರಿಗೆ ಅವರಿಗೆ ಆರ್ಥಿಕ ಸಹಾಯವಿಲ್ಲದೆ, ಅವರಿಗೆ ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾಳುಗಳಾಗಿ ಸ್ಪರ್ಧಿಸಲು ಅವಕಾಶ ಇಲ್ಲದಿದ್ದವರಿಗೆ ನೀವು ಕೊಟ್ಟಿರುವಂಥ ಯೋಜನೆಗಳು ಏನು ಹೇಳಿ? ತಾವು ದಯಯಿಟ್ಟು ಹೇಳಿ. ಯುವಜನ ಕ್ರೀಡಾ ಸಚಿವರು ಇಲ್ಲ, ಅವರೂ ಕೂಡ ರಾಜೀನಾಮೆ ಕೊಟ್ಟು ಬೇರೆ ಪಕ್ಷಕ್ಕೆ ಹೋಗಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಪಕೃತಿ ವಿಕೋಪದ ಪರಿಹಾರದ ಕಳೆದ ಬಾರಿಯ ಹಣ ಇನ್ನು ಬಿಡುಗಡೆಯಾಗಲಿಲ್ಲ. ಪ್ರಕೃತಿ ನಾವು ಬಯಸಿದ ಹಾಗೆ ಇಲ್ಲ. ಒಂದು ಕಡೆಯಿಂದ ಸಮುದ್ರದ ಕೊರೆತ, ಇನ್ನೊಂದು ಕಡೆಯಿಂದ ನದಿಯ ಕೊರೆತವನ್ನು ಅನುಭವಿಸುವಂಥ ಜನ. ಮಧ್ಯರಾತ್ರಿಯಲ್ಲಿ ಸಮುದ್ರ ಭೋರ್ಗರೆಸಿ ಬರುವಾಗ ಎಲ್ಲಿ ಓಡಿ ಹೋಗಲು ಸಾಧ್ಯ ಉಂಟು? ಪಕೃತಿ ವಿಕೋಪವಾಗಿ ಸಮುದ್ರ ಕೊರೆತವಾಗಿದೆ. ನಮ್ಮ ಜಿಲ್ಲೆಯಲ್ಲಿ ಸಮುದ್ರದ ಗೋಡೆಗಳನ್ನು ಕಟ್ಟುವ 143 ತುರ್ತು ಕಾಮಗಾರಿಗಳಾಗಿವೆ. ಚೀಫ್ ಸೆಕ್ರೆಟರಿಯವರು, ಸೆಕ್ರೆಟರಿಯವರು, ಜಿಲ್ಲಾಧಿಕಾರಿಗಳು ಎಲ್ಲರೂ ತನಿಖೆ ಮಾಡಿ 143 ಕಾಮಗಾರಿ 183 ಕಿ.ಮೀ.ದಷ್ಟು ಕಾಮಗಾರಿ ನಡೆದಿದೆ. 5 ಕೋಟಿ 22 ಲಕ್ಷ ರೂಪಾಯಿಗಳು ಖರ್ಚಾಗಿದೆ. ನದಿಯ ದಂಡೆಯಲ್ಲಿ 74 ಕಾಮಗಾರಿಗಳು ಆಗಿವೆ. 9.731 ಕಿ.ಮೀ. 3 ಕೋಟಿ 25 ಲಕ್ಷ ರೂಪಾಯಿ ತುರ್ತು ಪರಿಹಾರ ಕಾಮಗಾರಿ, ನಾವು ಅಧಿಕಾರಿಗಳು ಎಲ್ಲರೂ ಹೋಗಿ ಆ ಕಾಂಟ್ರಾಕ್ಟ್‌ದಾರರಿಗೆ ದಮ್ಮಯ್ಯ ಅಂದು ಮತ್ತೆ ಸರ್ಕಾರದಿಂದ ಪಡೆಯುತ್ತೇವೆಂದು ಕೆಲಸ ಮಾಡಿಸಿರುತ್ತೇವೆ, ಆ ಕೆಲಸ ಆಗಲಿಲ್ಲ ಎನ್ನುವ ಮಾತು ಬಂತು. ನಾನು ಕೊನೆಗೆ ಚೀಫ್ ಇಂಜಿನಿಯರಿಗೆ, ಸೆಕ್ರೆಟರಿಯವರಿಗೆ ಹೇಳಿದೆ, ನೀವು ತನಿಖೆ ಮಾಡಿ ಎಂದು ಜಿಲ್ಲಾಧಿಕಾರಿಗಳನ್ನು, ತಹಶೀಲ್ದಾರರನ್ನು ಕರೆದುಕೊಂಡು ನಾವು ತನಿಖೆ ಮಾಡಿದರೂ

ಕೂಡ ಇವತ್ತಿನವರೆಗೆ 8 ಕೋಟಿ ರೂಪಾಯಿ ಪ್ರಕೃತಿ ವಿಕೋಪದ ಹಣ ಕೊಡಲಿಲ್ಲ, ಒಂದು ವರ್ಷವಾಗುವುದಕ್ಕೆ ಬಂತು, ಇನ್ನು ಇರುವುದು ಕೇವಲ ಎರಡು ತಿಂಗಳು. ಇನ್ನೊಮ್ಮೆ ಪ್ರಕೃತಿ ವಿಕೋಪವಾದಾಗ ಸಮುದ್ರದ ಕೊರೆತಗಳು ಬಂದಾಗ, ಅಲ್ಲಿಯ ಜನರು ಸಂಕಷ್ಟಕ್ಕೆ ಬೀಳುವಾಗ ನಾವು ಯಾರ ಹತ್ತಿರ ಓಡಿಹೋಗಬೇಕೆನ್ನುವುದನ್ನು ದಯವಿಟ್ಟು ಹೇಳಿ. ದಯವಿಟ್ಟು ಈ ಹಣವನ್ನು ನೀವು ಪರೀಕ್ಷೆ ಮಾಡಿ, ಜಿಲ್ಲಾಧಿಕಾರಿಗಳಿಂದ ಹಿಡಿದು ಸೆಕ್ರೆಟರಿಯವರೆಗೆ ನೀವು ವೀಕ್ಷಣೆ ಮಾಡಿ ಹೋದಂಥ ಕಾಮಗಾರಿ ಇದೆ, ಅದಕ್ಕಾದರೂ ಹಣವನ್ನು ಬಿಡುಗಡೆ ಮಾಡಿ ಎಂದು ಹೇಳಿದರೂ ಕೂಡ, ನಿಮ್ಮ ಪ್ರಾಮಾಣಿಕತನ ನಿಮ್ಮ ದಿಟ್ಟತನ, ನೀವು ಕೊಟ್ಟಿರತಕ್ಕಂಥ ಆಶ್ವಾಸನೆ, ನೀವು ಕೊಡತಕ್ಕಂಥ ಕಾರ್ಯಕ್ರಮದ ಅನುಷ್ಠಾನದಲ್ಲಿ. ನಿಮ್ಮ ಅಧಿಕಾರಿಗಳು ಕೊಡತಕ್ಕಂಥ ತಪ್ಪು ಮಾಹಿತಿಯಲ್ಲಿ ನೀವು ನಿಭಾಯಿಸುವ ಸಾಮರ್ಥ್ಯ ಇರಬೇಕೆನ್ನುವ ಮಾತನ್ನು ಹೇಳಿ, ಇವತ್ತು ರಾಜ್ಯಪಾಲರನ್ನು ಅವಹೇಳನ ಮಾಡುವಂಥ ಭಾಷಣ ಎಂದು ಹೇಳಬೇಕಾಗುತ್ತದೆ. ನೀವು ಬರೆದುಕೊಟ್ಟಿದ್ದನ್ನು ಅವರು ಓದಿ ಹೇಳುತ್ತಿದ್ದಾರೆ. ಆದ್ದರಿಂದ ನಾನು ಈ ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಿಮಗೆ ಧನ್ಯವಾದಗಳು.

5.10 ಪಿ.ಎಂ

+ ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೇ, ಜನತಾದಳ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಸುಮಾರು 5 ಭಾಷಣಗಳನ್ನು ಕರ್ನಾಟಕ ವಿಧಾನ ಸಭೆಯಲ್ಲಿ ಮಂಡಿಸಿದರು. ನಾನು ಏನು ನಿರೀಕ್ಷೆ ಇಟ್ಟುಕೊಂಡಿದ್ದೇನೋ ಆ ನನ್ನ ಎಲ್ಲಾ ನಿರೀಕ್ಷೆಗಳನ್ನೂ ನಿರುತ್ಸಾಹ ಮಾಡಿತು. ರಾಜ್ಯಪಾಲರ ಭಾಷಣ ಎಂದು ಹೇಳಿದರೆ ಆ ಸರ್ಕಾರ ಒಂದು ವರ್ಷದಲ್ಲಿ ಏನು ಕಾರ್ಯಕಲಾಪಗಳನ್ನು ಹಾಕಿಕೊಂಡಿದೆ ಎನ್ನುವುದನ್ನು ಪ್ರತಿಬಿಂಬಿಸುವಂಥಾದ್ದು. ಈ ನಾಡಿನಲ್ಲಿರುವ ಜನರಿಗೆ ಹೊಂದಿಕೊಂಡಿರುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಒಂದು ದಿಕ್ಸೂಚಿ, ಹಡಗು ಬಂದರು ಸೇರುವಾಗ, ವಿಮಾನ ಇಳಿದು ವಿಮಾನ ನಿಲ್ದಾಣ ಸೇರುವಾಗ ಯಾವ ರೀತಿ ದಿಕ್ಸೂಚಿ, ತೋರಿಸುತ್ತದೆಯೋ ಆ ರೀತಿ ಈ ರಾಜ್ಯಪಾಲರ ಭಾಷಣ. ಇಂತಹ ಕಡೆ ನಿಲ್ದಾಣ ಉಂಟು ಎಂದು ತೋರಿಸುವಂಥಾದ್ದು. ಅದೇ ತರಹ ರಾಜ್ಯ ಸರ್ಕಾರ ತನ್ನ ಮುಂದಿನ ಒಂದು ವರ್ಷದ ಅವಧಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಿಕ್ಕೆ ಇರುವ ಸಾಧ್ಯತೆಯ ಒಂದು ದಿಕ್ಸೂಚಿ. ಅದೇ ರೀತಿ ರಾಜ್ಯಪಾಲರ ಭಾಷಣ ಎನ್ನುವ ದಿಕ್ಸೂಚಿ ಸರಿಯಾದ ರೀತಿಯಲ್ಲಿ ಇಲ್ಲ. ಇವರು ತೋರಿಸುವ ದಿಕ್ಸೂಚಿ ಪ್ರಕಾರ ನಡೆದರೆ ಆಕ್ಸಿಡೆಂಟ್ಸ್ ಆಗುವ ಸಂದರ್ಭಗಳೇ ಜಾಸ್ತಿ. ಆ ದಿಕ್ಸೂಚಿಯನ್ನು ಇವರು ಪೂರ್ಣ ಪ್ರಮಾಣದಲ್ಲಿ ತೋರಿಸುತ್ತಿಲ್ಲ. ಬೇರೆ ಕಡೆಯಲ್ಲಿ ತೋರಿಸುತ್ತಿದ್ದಾರೆ. ಆದ್ದರಿಂದ ವಿಮಾನ ಬೇರೆ ಕಡೆ ಬಂದು ಲ್ಯಾಂಡ್ ಆಗುವಂತಹ ಸಂದರ್ಭ ಉಂಟು. ಇವತ್ತು ಈ ರಾಜ್ಯಪಾಲರ ಭಾಷಣ ನಮಗೆಲ್ಲಾ ಭ್ರಮನಿರಸನವಾಗಿದೆ. ರಾಜ್ಯ

ಸರ್ಕಾರದ ಅಭಿವೃದ್ಧಿಯ ಬಗ್ಗೆ ತಮ್ಮ ನಿಲುವು ಏನು ಎನ್ನುವುದನ್ನು ಸಮರ್ಥಿಸಲಿಲ್ಲ, ಅಥವಾ ಉದ್ದೇಶಪೂರ್ವಕವಾಗಿ ತಿರುಚಿ ಒಂದು ಭಾಷಣವನ್ನು ಕೊಟ್ಟ ಹಾಗೆ ಆಗಿದೆ ಎಂದು ನನ್ನ ಅನಿಸಿಕೆ. ರಾಜ್ಯಪಾಲರ ಭಾಷಣದ ಎರಡನೇ ಪ್ಯಾರಾದಲ್ಲಿ ಲೋಕಸಭೆಗೆ ಮುಕ್ತ ಮತ್ತು ನ್ಯಾಯಬದ್ಧವಾದ ರೀತಿಯಲ್ಲಿ ಚುನಾವಣೆಯನ್ನು ನಡೆಸಿದ್ದರಿಂದ ರಾಜ್ಯ ಸರ್ಕಾರದವರು ತಮ್ಮ ಬೆನ್ನುತಟ್ಟಿಕೊಂಡಿದ್ದಾರೆ. ಇದರ ಜೊತೆಗೆ ಅತ್ಯುನ್ನತ ಸರ್ಕಾರವು ಹಾಲಿ ಆಡಳಿತದಲ್ಲಿರುವ ಸರ್ಕಾರಗಳ ವಿರುದ್ಧ ಅಸಮಧಾನ ವ್ಯಕ್ತವಾಗಿರುವುದು ಭಾರತಾದ್ಯಂತ ಕಂಡು ಬಂದಿರುವ ಪ್ರತಿಕ್ರಿಯೆ ಆದರೂ ಜನತೆಯ ಆಶೋತ್ತರ ಮೇಲ್ಮಟ್ಟಕ್ಕೆ ಏರುತ್ತಿರುವುದರಿಂದ ಸರ್ಕಾರ ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂದು ಜನನಿರ್ಣಯದಲ್ಲಿ ವ್ಯಕ್ತವಾಗಿದೆ ಎಂದು ಅವರು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಬಹುಶಃ ಇದಕ್ಕಿಂತ ಸುಳ್ಳು ಯಾವುದೂ ಇರಲಿಕ್ಕೆ ಇಲ್ಲ. ಈ ದೇಶದ ವಿಚಾರ ಬೇರೆ. ಆದರೆ ಈ ರಾಜ್ಯದ ಪ್ರಗತಿಯ ಬಗ್ಗೆ ಜನರು ಸ್ಪಷ್ಟವಾಗಿ ಒಂದು ನಿಲುವನ್ನು ಸೂಚನೆ ಮಾಡಿದ್ದಾರೆ. ಇವತ್ತು ವ್ಯವಸ್ಥಿತವಾದ ರೀತಿಯಲ್ಲಿ ಚುನಾವಣೆಗಳನ್ನು ನಡೆಸಿದ್ದೇವೆಂದು ಹೇಳುವಂತಹ ಸರ್ಕಾರ ಪತ್ರಿಕಾ ಹೇಳಿಕೆಗಳನ್ನು ನಾವು ಗಮನಿಸಿದರೆ ಇಲ್ಲಿ ಪ್ರಾಮಾಣಿಕವಾಗಿ ಚುನಾವಣೆ ಆಗಿದೆಯೇ? ನಾನು ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ''ಮತಪತ್ರಗಳನ್ನು ಅಪಹರಿಸಿದ ದಳದ ಶಾಸಕ. ರಾಜ್ಯದಲ್ಲಿ ಇಂದು ಮರುಮತದಾನ. ರಾಜ್ಯದಲ್ಲಿ 36 ಕೇಂದ್ರಗಳಲ್ಲಿ ಮರು ಮತದಾನಕ್ಕೆ ಸಲಹೆ. ರಾಜ್ಯದ 8 ಮತಗಟ್ಟೆಗಳಲ್ಲಿ ನಾಳೆ ಮತದಾನ. ಮಾಜಿ ಪ್ರಧಾನಿಯವರ ಕ್ಷೇತ್ರದಲ್ಲಿ ಮರುಮತದಾನ. ಮರುಕಳಿಸಿದ ಚುನಾವಣಾ ಹಿಂಸಾಚಾರ. ಎರಡನೇಯ ಹಂತದ ಚುನಾವಣೆಗೆ ಸಕಲ ಭದ್ರತಾ ವ್ಯವಸ್ಥೆ. ಫಲಿತಾಂಶ ಪ್ರಕಟಣೆ ನಂತರ ದಳ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆ.'' ಇವು ಇಷ್ಟು ಪತ್ರಿಕಾ ಹೇಳಿಕೆಗಳು. ಇದು ಮುಕ್ತ ಚುನಾವಣೆ ನಡೆಸಿದ್ದನ್ನು ಕರ್ನಾಟಕ ರಾಜ್ಯದಲ್ಲಿ ಪ್ರತಿಬಿಂಬಿಸುತ್ತಾ ಉಂಟಾ? ಈ ಸರ್ಕಾರದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಚುನಾವಣೆಗಳು ಆಗಿದೆಯೇ ಮಾಜಿ ಪ್ರಧಾನಿ ★ರವರ ಕ್ಷೇತ್ರದಲ್ಲಿ ಹಲವಾರು ಲೋಪದೋಷಗಳು ಆಗಿದೆ. ಮತಪತ್ರಗಳ ವಶೀಕರಣ ಆಗಿದೆ. ಚುನಾವಣೆ ಬಗ್ಗೆ ತಾವು ರಾಜ್ಯಪಾಲರ ಭಾಷಣದಲ್ಲಿ ಏನು ಉಲ್ಲೇಖ ಮಾಡಿದ್ದೀರಿ ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಚನ್ನಿಗಪ್ಪ: ಬೇರೆ ಕ್ಷೇತ್ರಗಳಲ್ಲಿ ಸಹ ಅದೇ ರೀತಿ ನಡೆದಿದೆ. ಅದು ಬಿಟ್ಟು ಮಾಜಿ ಪ್ರಧಾನಿ ದೇವೇಗೌಡರ ಕ್ಷೇತ್ರ ಒಂದನ್ನೇ ತಾವು ಏಕೆ ಉಲ್ಲೇಖ ಮಾಡುತ್ತೀರಿ?

(ಗೊಂದಲ)

ಉಪಾಧ್ಯಕ್ಷರು: ಹೆಸರು ಬಳಸಬೇಡಿ.

★ ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಇವರು ಇದನ್ನು ಉಲ್ಲೇಖ ಮಾಡಿದ್ದಾರೆ. ಈ ರೀತಿ ಆಗಿರುವಾಗ ಶಾಂತಿಯುತವಾಗಿ ಮತದಾನ ಆಗಿದೆಯೇ? ಅದೇ ರೀತಿ ರಾಯಚೂರು, ಗುಲ್ಬರ್ಗಾ ದಾವಣಗೆರೆಗಳಲ್ಲಿ ಗಲಾಟೆಗಳು ಆಗಿದೆ. ಇದು ಶಾಂತ ಮತದಾನವೇ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅವರ ಪಕ್ಷ ಆಡಳಿತ ಮಾಡುತ್ತಿರುವ ರಾಜ್ಯಗಳನ್ನು ಹೋಲಿಸಿ ನಾವು ಇಲ್ಲಿ ಬರೆದಿದ್ದೇವೆ.

ಶ್ರೀ ಕೆ.ಜಯರಾಮಶೆಟ್ಟಿ: ಕುಂಬಳಕಾಯಿ ಕಳ್ಳ ಅಂದರೆ ಯಾವ ರೀತಿ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೋ ಹಾಗೆ ಇವರು ಇಲ್ಲಿ ಗಲಾಟೆ ಮಾಡುತ್ತಿದ್ದಾರೆ. ತಮ್ಮ ರಾಜ್ಯಪಾಲರ ಭಾಷಣದನಲ್ಲಿ ಉಲ್ಲೇಖ ಮಾಡಿದ್ದನ್ನು ನಾನು ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ, ಅದಕ್ಕೆ ಏಕೆ ಇವರು ಗಲಾಟೆ ಮಾಡಬೇಕು? ಆದ್ದರಿಂದ ಒಟ್ಟು ತೀರ್ಮಾನ ತಾವು ರಾಜ್ಯಾಪಾಲರ ಭಾಷಣದಲ್ಲಿ ಹೇಳಿದಹಾಗೆ ಇಲ್ಲ. ಜನತಾದಳ ಸರ್ಕಾರ ಮನೆಗೆ ಹೋಗಿ ಎಂದು ಜನ ತೀರ್ಮಾನ ಕೊಟ್ಟಿದ್ದಾರೆ ಅಷ್ಟೇ. ನಾನು ಇಲ್ಲಿ ಜನರ ತೀರ್ಮಾನವನ್ನು ಉಲ್ಲೇಖ ಮಾಡಿ ಮಾತನಾಡುತ್ತಿದ್ದೇನೆ. ಹೊಸದಾಗಿ ಏನೂ ಮಾತನಾಡುತ್ತಿಲ್ಲ. ತಾವು ಇರುವ ವಿಷಯವನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು.

ಸಮಸ್ಯೆ ಬಂದಿರುವುದು ತಮ್ಮ ಕಡೆಗೆ ನಮ್ಮ ಕಡೆ ಅಲ್ಲ. ರಾಜ್ಯಪಾಲರ ಭಾಷಣದ 4ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಅಂದರೆ ''ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಅವಶ್ಯಕವಾದ ಬಂಡವಾಳವನ್ನು ಆಕರ್ಷಿಸುವಲ್ಲಿ ಕರ್ನಾಟಕ ರಾಜ್ಯ ಅಗ್ರಸ್ಥಾನದಲ್ಲಿದೆ ಎನ್ನುವುದನ್ನು ತಿಳಿಸಲು ನಾನು ಹರ್ಷಿತನಾಗಿದ್ದೇನೆ. ಪರಿಣಾಮವಾಗಿ ಅಭಿವೃದ್ಧಿ ವೇಗ ಹೆಚ್ಚಾಗಿದ್ದು ಅಲ್ಲದೇ ಉದ್ಯೋಗಾವಕಾಶಗಳು ಹೆಚ್ಚಾಗಿದೆ, ಕಳೆದ ಮೂರು ವರ್ಷಗಳಲ್ಲಿ ಸುಮಾರು 5400 ಕೋಟಿ ರೂಪಾಯಿಗಳಷ್ಟು ವಿದೇಶಿ ಬಂಡವಾಳ ನೇರವಾಗಿ ಆಕರ್ಷಿಸಿದೆ.'' ನಾನು ರಾಜ್ಯ ಸರ್ಕಾರವನ್ನು ಕೇಳುತ್ತಿದ್ದೇನೆ, ಇದರ ಅಂಕಿಅಂಶಗಳು ತಮ್ಮಲ್ಲಿವೆಯೇ? ಇದರ ಸತ್ಯಾಸತ್ಯತೆ ಬಗ್ಗೆ ತಾವು ಹೇಳಿಕೆಯನ್ನು ಕೊಡುತ್ತೀರಾ? ಕೇವಲ 5400 ಕೋಟಿ ರೂಪಾಯಿಗಳ ಬಂಡವಾಳದ ಒಂದು ಮಾತನ್ನು ಬಿಟ್ಟರೆ ಬೇರೆ ಮಾತು ಇಲ್ಲ. ಇದು ಕೇವಲ ಒಂದು ಪತ್ರಿಕಾ ಹೇಳಿಕೆ. ಅಥವಾ ಈ ಬಗ್ಗೆ ಏನಾದರೂ ಚರ್ಚೆ ಆಗಿದೆಯೇ? ಇದು ನಿರ್ಧಾರ ಅಲ್ಲ. ಈ ವಿಚಾರವನ್ನು ಕಾರ್ಯಗತಗೊಳಿಸುವ ನಿರ್ಧಾರ ಇನ್ನೂ ಆಗಿಲ್ಲ. ಅಷ್ಟರಲ್ಲಿ ಈ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡುವುದು ಅಷ್ಟು ಸಮಂಜಸ ಅಲ್ಲ ಅದು ಸರಿಯಾದಂತ ದಿಕ್ಸೂಚಿಯಲ್ಲ. ಈ ವಿಚಾರದಲ್ಲಿ ನನ್ನ ಸಹಮತ ಇಲ್ಲ. ರಾಜ್ಯ ಸರ್ಕಾರ ಇದರ ಬಗ್ಗೆ ಗಂಭೀರ ಚಿಂತನೆ ಮಾಡಬೇಕು. ಸುಮಾರು 5400 ಕೋಟಿ ರೂಪಾಯಿಗಳ ವಿದೇಶಿ ಬಂಡವಾಳವನ್ನು ನಿಜವಾಗಿಯೂ ತಾವು ಆಕರ್ಷಣೆ ಮಾಡಿದ್ದರೆ, ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಬಂತು ಎನ್ನುವಂತಹ ಅಂಕಿಅಂಶಗಳನ್ನು ಕೊಟ್ಟಿದ್ದರೆ ಅದು

ಒಂದು ರೀತಿಯಲ್ಲಿ ಪರಿಣಾಮಕಾರಿ ಆಗುತ್ತದೆ ಎಂಬುದು ನನ್ನ ಅನಿಸಿಕೆ. ಅದೇ ರೀತಿ ರಾಜ್ಯಪಾಲರ ಭಾಷಣದ ಪ್ಯಾರಾ 6, 7 ಮತ್ತು 9ರಲ್ಲಿ ತಾವು ಏನು ಹೇಳಿದ್ದೀರಿ ಅಂದರೆ ರಾಜ್ಯದ ವಿದ್ಯುತ್ ನಿಗಮ ಮತ್ತು ವಿದ್ಯುತ್ ಸ್ಥಾವರದ ಬಗ್ಗೆ ಉಲ್ಲೇಖ ಆಗಿದೆ. ವಿದ್ಯುತ್ ಸಾಗಾಣಿಕೆ ಬಗ್ಗೆ ಉಲ್ಲೇಖ ಆಗಿದೆ. ವಾಸ್ತವಿಕವಾಗಿ ವಿದ್ಯುತ್ ಸಾಗಾಣಿಕೆ ರಂಗದಲ್ಲಿ ಖಾಸಗಿ ರಂಗ ಭಾಗವಹಿಸುವಂತೆ ಬಹಳಷ್ಟು ದೊಡ್ಡ ವಿಚಾರಗಳನ್ನು ಹೇಳಿಕೊಂಡಿದ್ದೀರಿ. ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಕೆ.ಇ.ಬಿ. ಕಾರ್ಯವೈಖರಿ ಬಗ್ಗೆ ಸಾಮಾನ್ಯ ಜನರಿಗೆ ಇವತ್ತು ಭ್ರಮನಿರಸನವಾಗಿದೆ. ಈ ವಿಚಾರದಲ್ಲಿ ಈ ಸದನದಲ್ಲಿ ಆಗಾಗ ಚರ್ಚೆ ಆಗುತ್ತಾ ಉಂಟು. ಎಲ್ಲಾ ಪಕ್ಷದ ಸದಸ್ಯರು ಇದರ ಬಗ್ಗೆ ಚರ್ಚೆಮಾಡುತ್ತಿದ್ದಾರೆ. ಈ ಇಲಾಖೆ ಬಗ್ಗೆ ರೈತರಿಗೆ ಸಮಾಧಾನ ಇದೆಯೇ? ರಾಜ್ಯದ ಸಾಮಾನ್ಯ ವ್ಯಕ್ತಿಗೆ ಈ ಇಲಾಖೆ ಬಗ್ಗೆ ಸಮಾಧಾನ ಇದೆಯೇ? ಇವತ್ತು ವಿದ್ಯುತ್‌ನ್ನು ನಿಗದಿತ ಸಮಯದಲ್ಲಿ ನಿಗದಿತ ಪ್ರಮಾಣದಲ್ಲಿ ನೀವು ಕೊಡುತ್ತಿದ್ದೀರಾ? ರೈತರ ಪಂಪ್‌ಸೆಟ್‌ಗಳಿಗೆ ನೀವು ಸರಿಯಾಗಿ ಸರಬರಾಜು ಮಾಡುತ್ತಿದ್ದೀರಾ? ರೈತರ ಪಂಪ್‌ಸೆಟ್‌ಗಳಿಗೆ ಡಿಪಾಜಿಟ್ ಮಾಡುವ ಬಗ್ಗೆ ತಮ್ಮ ಬಳಿ ಏಕಾಭಿಪ್ರಾಯ ಉಂಟಾ? ಒಂದು ಜಿಲ್ಲೆಯಲ್ಲಿ 500 ರೂಪಾಯಿಗಳು ಆದರೆ ಒಂದು ಜಿಲ್ಲೆಯಲ್ಲಿ 300 ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದೀರಿ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ರೈತರಿಗೆ 500 ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದೀರಿ, ಏಕೆಂದರೆ ಒಬ್ಬ ರೈತನ ಹತ್ತಿರ ಎರಡು ಎಕರೆ ಜಮೀನಿನಲ್ಲಿ ಅರ್ಧ ಎಕರೆ ತೆಂಗಿನ ಕ್ರಾಪ್ ಇದ್ದರೆ ಇದನ್ನು ಕಮರ್ಷಿಯಲ್ ಎಂದು ಡಿಕ್ಲೇರ್ ಮಾಡಿದ್ದೀರಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ಆ ತರಹ ಇಲ್ಲ. ಅಲ್ಲಿ 30 ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 50 ತೆಂಗಿನ ಸಸಿ ಉಂಟು, ಅಥವಾ ಭತ್ತದ ಬೆಳೆ ಬೆಳೆಯುತ್ತಿದ್ದರೆ ಇದನ್ನು ಕಮರ್ಷಿಯಲ್ ಕ್ರಾಪ್ ಆಗಿ ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮೀಟಿಂಗ್ ಕರೆದಿದ್ದರು, ಈ ವಿಷಯವನ್ನು ನಾನು ಅವರ ಗಮನಕ್ಕೆ ತಂದಿದ್ದೆವು. ಇದರ ಬಗ್ಗೆ ಚರ್ಚೆ ಆಯಿತು, ಬಲತ್ಕಾರವಾಗಿ ವಸೂಲಿ ಆಗುತ್ತಿದೆ ಎಂದು. ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಹೇಳಿದ್ದಾರೆ. ಸರ್ಕಾರ ಕೆ.ಇ.ಬಿ. ಅಧಿಕಾರಿಗಳನ್ನು ಕರೆದು ತಕ್ಷಣ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿತು. ಆದರೆ ಇವತ್ತಿನವರೆಗೂ ಆಗಲಿಲ್ಲ. ರಾಜ್ಯದ ಬೊಕ್ಕಸಕ್ಕೆ ಬರಬೇಕಾಗಿರುವಂತಹ ಹಣ ಬಹಳಷ್ಟು ದೊಡ್ಡ ದೊಡ್ಡ ಕೈಗಾರಿಕೆಗಳಿಂದ ವಸೂಲಾತಿಯಾಗಬೇಕಾಗಿರುವಂತಹ ವಿದ್ಯುತ್ ಶುಲ್ಕವನ್ನು ವಸೂಲಿ ಮಾಡಿದ್ದೀರಾ? ಯಾವಾಗ ವಸೂಲಿ ಮಾಡುತ್ತೀರಿ? ರೈತನ ಪಂಪ್‌ಸೆಟ್‌ಗೆ 500 ರೂಪಾಯಿಗಳನ್ನು ಕೊಡದಿದ್ದರೆ ತಕ್ಷಣ ಅವರ ಫ್ಯೂಸ್ ಕಿತ್ತುಕೊಂಡು ಹೋಗುವಂತಹ ಸರ್ಕಾರ ದೊಡ್ಡ ದೊಡ್ಡ ಕೈಗಾರಿಕೆಗಳವರಿಂದ ವಸೂಲಿ ಮಾಡಬೇಕಾದಂತಹ ದೊಡ್ಡ ಮೊತ್ತ 905 ಕೋಟಿ ರೂಪಾಯಿಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಸ್ಥಳೀಯ ಸಂಸ್ಥೆಗಳು ಕರ್ನಾಟಕ ಸರ್ಕಾರದ ವಿದ್ಯುತ್ ಮಂಡಳಿ ಬಗ್ಗೆ ವರದಿ ಸಲ್ಲಿಕೆ ಮಾಡುವಂತಹ

ಸಂದರ್ಭದಲ್ಲಿ 1015 ಕೋಟಿ ರೂಪಾಯಿಗಳ ಬಾಕಿ ಹಣವನ್ನು ವಸೂಲಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿತ್ತು. ಅಷ್ಟು ಬೃಹತ್ ಮಟ್ಟದ ಬಾಕಿ ವಸೂಲಿ ಆಗದೇ ಇದ್ದು ಸಮಿತಿ ಆ ಬಗ್ಗೆ ತನ್ನ ಅಸಮಾಧಾನವನ್ನು ವ್ಯಕ್ತ ಪಡಿಸಿದೆ, ಆದ್ದರಿಂದ ಆರ್ಥಿಕ ಸಂಕಷ್ಟದಿಂದ ಪಾರಾಗಲು ವಿವಿಧ ಬಳಕೆದಾರರಿಂದ ಬರಬೇಕಾಗಿರುವ ಬಾಕಿ ವಸೂಲಿಗೆ ಕರ್ನಾಟಕ ವಿದ್ಯುತ್ ಮಂಡಲಿ ಕಠಿಣ ಕ್ರಮಗಳನ್ನು ಅನುಸರಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡಿದೆ. ಆದರೂ ಕೂಡ ಇದುವರೆಗೂ ವಸೂಲಿ ಆಗಲಿಲ್ಲ. ಇವತ್ತು 905 ಕೋಟಿ ರೂಪಾಯಿಗಳ ಬಗ್ಗೆ ರಾಜ್ಯ ಸರ್ಕಾರ ಒಂದು ಚಕಾರ ಶಬ್ದ ತೆಗೆದುಕೊಂಡಿಲ್ಲ. ರೈತರ ಬಾಕಿ ವಸೂಲಿ ಮಾಡುವುದಕ್ಕೆ ನಿಮಗೆ ಏನು ನೈತಿಕ ಹಕ್ಕು ಇದೆ. ದೊಡ್ಡ ದೊಡ್ಡ ಕೈಗಾರಿಕೆಗಳವರಿಂದ ಬಾಕಿ ವಸೂಲಿ ಮಾಡಲು ಸಾಧ್ಯವಿಲ್ಲದವರು ಸಾಮಾನ್ಯ ರೈತ 50 ರೂಪಾಯಿ ಬಾಕಿ ಇಟ್ಟಿದ್ದರೆ ಆ ಬಾಕಿಯನ್ನು ತಾವು ಯಾವ ನೈತಿಕ ಹಕ್ಕಿನಿಂದ ಕೇಳುತ್ತಿದ್ದೀರಿ? ನಿಮ್ಮ ಸೋಲಿಗೆ ಅದೂ ಒಂದು ಕಾರಣ ಆಗಿರಬಹುದು. ಈ ಬಗ್ಗೆ ನೀವು ಪ್ರಾಮಾಣಿಕವಾಗಿ ವರ್ತನೆ ಮಾಡಲಿಲ್ಲ. ವಿಧಾನ ಸಭೆಯ ವಿಷಯ ಸಮಿತಿಗಳೂ ಸಹ ಸರ್ಕಾರವನ್ನು ಈ ಬಗ್ಗೆ ಆಗ್ರಹ ಮಾಡಿತ್ತು. ಆದರೂ ಸರ್ಕಾರ ಮೌನವಾಗಿ ಕುಳಿತಿದೆ. ಕೆ.ಇ.ಬಿ., ಕಾರ್ಯ ನಿರ್ವಹಣೆ ಬಗ್ಗೆ ಜನರು ವಿರೋಧ ವ್ಯಕ್ತಪಡಿಸುವುದು ಪ್ರತ್ಯೇಕ. ಆದರೆ, ರಾಜ್ಯ ಸರ್ಕಾರದ ಸಚಿವ ಸಂಪುಟದ ಉಪ ಸಮಿತಿಯೇ ಕೆ.ಇ.ಬಿ, ಕಾರ್ಯ ನಿರ್ವಹಣೆ ಮತ್ತು ಕಾರ್ಯ ವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ, ಈ ರೀತಿ ತೀರಾ ಅತೃಪ್ತಿಕರವಾಗಿ ಕಾರ್ಯ ನಿರ್ವಹಣೆ ಮಾಡಲು ಕಾರಣವೇನೆಂದು ಇನ್ನು ಎರಡು ಮೂರು ದಿನಗಳ ಒಳಗಾಗಿ ವರದಿಯನ್ನು ಕೊಡಬೇಕೆಂದು ಸಚಿವ ಸಂಪುಟದ ಉಪ ಸಮಿತಿಯು ಕೆ.ಇ.ಬಿ, ಇಲಾಖೆಗೆ ಕೇಳಿದೆ. ಅವರಿಂದ ಸರ್ಕಾರಕ್ಕೆ ಯಾವ ರೀತಿ ವರದಿ ಬಂದಿದೆ? ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ? ಕೆ.ಇ.ಬಿ.ಯನ್ನು ಮುಚ್ಚಿಸಿ ಇದನ್ನು ಖಾಸಗಿಯವರಿಗೆ ವಹಿಸಿಕೊಡಿ, ಇದನ್ನು ನಿಮ್ಮಿಂದ ಆಳ್ವಿಕೆ ಮಾಡುವುದಕ್ಕೆ ಸಾಧ್ಯತೆ ಇಲ್ಲ. ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಲಾಗಿದೆ? ವಿದ್ಯುತ್‌ನ್ನು ಸರಿಯಾಗಿ ಪೂರೈಸಲು ಅವರಿಂದ ಸಾಧ್ಯವಾಗದೇ ಇದ್ದರೂ ಜನರಿಂದ ಠೇವಣಿಯನ್ನು ಸಂಗ್ರಹಿಸುವುದು ಏತಕ್ಕೆ? ನನಗೆ ಗೊತ್ತಿದ್ದ ಹಾಗೆ ಮನೆ ಅಥವಾ ಇನ್ನಿತರ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾದರೆ ಚದುರ ಮೀಟರ್ ಲೆಕ್ಕದ ಪ್ರಕಾರ ಇಷ್ಟೇ ಕಿಲೋವಾಟ್ ವಿದ್ಯುತ್ತನ್ನು ಪಡೆಯಬೇಕೆಂಬ ನಿಯಮವನ್ನು ಹಾಕಲಾಗಿದೆ. ವಾಸದ ಮನೆಗಳಿಗೆ, ಒಂದು ಚದುರ ಮೀಟರ್‌ಗೆ 50 ವಾಟ್ಸ್, ವಾಣಿಜ್ಯ ಮಳಿಗೆ ಕಟ್ಟಡಗಳಿಗೆ ಚದುರ ಮೀಟರ್‌ಗೆ 75 ವಾಟ್ಸ್‌ನಂತೆ ವಿದ್ಯುತ್ತನ್ನು ಬಳಸಬೇಕೆಂದು ವಿದ್ಯುತ್ ಮಂಡಳಿಯು ಕಡ್ಡಾಯಗೊಳಿಸಿದೆ. ಇದು ಬಲಾತ್ಕಾರದ ಹೇರಿಕೆ, ಇದಕ್ಕೋಸ್ಕರ ಡೆಪಾಸಿಟ್ ಮಾಡಬೇಕು. ಮಂಡಳಿಯ ನಿಯಮದ ಪ್ರಕಾರ ವಾಸದ ಮನೆಗಳಲ್ಲಿ ಒಂದು ಚದುರ ಮೀಟರ್ ಅಳತೆಗೆ 50 ವಾಟ್ಸ್‌ನಂತೆ ವಿದ್ಯುತ್ ಬಳಸಿದರೆ 9 ಚದುರ ಮೀಟರ್ ಇರತಕ್ಕಂಥ ವಾಸದ ಮನೆಯಲ್ಲಿ ಒಟ್ಟು 450 ವಾಟ್ಸ್ ವಿದ್ಯುತ್ತನ್ನು

ಬಳಸಬೇಕಾಗುತ್ತದೆ. 450 ವಾಟ್ಸ್ ವಿದ್ಯುತ್ ಪಡೆಯುವುದಕ್ಕಾಗಿ 3 ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡಬೇಕು. ಅಷ್ಟು ವಿದ್ಯುತ್ತನ್ನು ಬಳಸದೇ ಇದ್ದರೂ ಇಷ್ಟು ಮೊತ್ತದ ಡೆಪಾಸಿಟ್ ಪಡೆಯುವುದು ಒಂದು ರೀತಿ ಬಲಾತ್ಕಾರದ ವಸೂಲಿಯಾಗಿದೆ. ಇದು, ರಾಜ್ಯ ಸರ್ಕಾರ ಮತ್ತು ವಿದ್ಯುತ್ ಮಂಡಳಿಯವರು ಮಾಡತಕ್ಕಂಥ ಹಗಲು ದರೋಡೆಯಾಗಿದೆ. ಒಂದು ರೂಮಿನಲ್ಲಿ ಸಾಮಾನ್ಯವಾಗಿ ಒಂದು ಬಲ್ಬ್ ಇದ್ದರೆ ಸಾಕಾಗುತ್ತದೆ. ಆದರೆ, ಇವರ ಲೆಕ್ಕಾಚಾರದ ಪ್ರಕಾರ ಜಾಸ್ತಿ ವಾಟ್ಸ್‌ಗೆ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಸಾಮಾನ್ಯ ಬಳಕೆದಾರರ ಹತ್ತಿರ ಮತ್ತು ಇಂಡಸ್ಟ್ರೀಯವರ ಹತ್ತಿರ ವಸೂಲಿ ಮಾಡುವ ವಿಷಯ ಬೇರೆ ಬೇರೆಯಾಗಿರುವುದರಿಂದ ಇದರ ಬಗ್ಗೆ ವೈಜ್ಞಾನಿಕವಾಗಿ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ? ಅಪಾರ ಪ್ರಮಾಣದಲ್ಲಿ ವಿದ್ಯುತ್ ಠೇವಣಿ ಪಡೆಯುವುದು ಮಂಡಳಿಯ ಏಕೈಕ ದುರುದ್ದೇಶವಾಗಿದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡಬೇಕು. ಇದು ಜನರಿಗೆ ಮಾಡುತ್ತಿರುವ ವಂಚನೆಯಾಗಿದೆ. ಈ ಸರ್ಕಾರದ ಮೇಲೆ ಜನರು ನಂಬಿಕೆ ಇಟ್ಟು 5 ವರ್ಷಗಳವರೆಗೆ ಮತ ಹಾಕಿದ್ದಾರೆ. ಇಷ್ಟೊಂದು ಅವೈಜ್ಞಾನಿಕ ರೀತಿಯಲ್ಲಿ ಠೇವಣಿ ಸಂಗ್ರಹಿಸುವುದಾದರೆ ಸಾಮಾನ್ಯ ಜನರ ಪರಿಸ್ಥಿತಿ ಏನಾಗುತ್ತದೆ? ಹೇಗಾದರೂ ವಿದ್ಯುತ್ ಮಂಡಳಿಗೆ ಹಣ ಬರಬೇಕೆನ್ನುವ ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಸರ್ಕಾರ ಇದೆ. ಇವತ್ತಿನ ದಿವಸ ಕೆ.ಇ.ಬಿ., ನೌಕರರಿಗೆ ಪುಕ್ಕಟೆಯಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ, ಅದೇ ರೀತಿ ರೈತರುಗಳ ಪಂಪ್‌ಸೆಟ್‌ಗಳಿಗೂ ಪುಕ್ಕಟೆ ವಿದ್ಯುತ್ ಕೊಡುವುದರಿಂದ ಏನು ನಷ್ಟವಾಗುತ್ತದೆ? ಪುಕ್ಕಟೆಯಾಗಿ ರೈತರುಗಳಿಗೆ ವಿದ್ಯುತ್ ಸರಬರಾಜು ಮಾಡಿದರೆ ಅವರುಗಳು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಇವತ್ತಿನ ದಿವಸ ಲಂಗುಲಗಾಮು ಇಲ್ಲದ ರೀತಿಯಲ್ಲಿ, ವಿದ್ಯುತ್‌ನ್ನು ನಿಲುಗಡೆ ಮಾಡಲಾಗುತ್ತಿದೆ. ನನ್ನ ಕ್ಷೇತ್ರದಲ್ಲಿ 'ಹುಳಿಯೂರ್' ಎನ್ನುವ ಒಂದು ಗ್ರಾಮ ಉಂಟು, ಆ ಗ್ರಾಮಕ್ಕೆ ಕಳೆದ 8 ತಿಂಗಳುಗಳಿಂದ ಬೆಳಿಗೆ 6 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ವಿದ್ಯುತ್‌ನ್ನು ಸರಬರಾಜು ಮಾಡುತ್ತಿಲ್ಲ. ಆಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಇತ್ತೀಚಿನ ದಿವಸಗಳಲ್ಲಿ ದಿವಸಕ್ಕೆ ಕನಿಷ್ಠ 8ರಿಂದ 10 ಗಂಟೆಯವರೆಗೆ ವಿದ್ಯುತ್‌ನ್ನು ನಿಲುಗಡೆ ಮಾಡಲಾಗುತ್ತಿದೆ. ಇದಕ್ಕೆ ಕಾರಣಗಳು ಬೇರೆ ಬೇರೆ ಇವೆಯೆಂದು ಹೇಳುತ್ತಾರೆ, ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದರೆ, ಮೇಲಿನ ಅಧಿಕಾರಿಗಳು ನಿರ್ದೇಶನ ಕೊಟ್ಟಂತೆ ನಾವು ವಿದ್ಯುತ್ ನಿಲುಗಡೆ ಮಾಡಬೇಕಾಗುತ್ತದೆಂದು ಹೇಳುತ್ತಾರೆ. ಈ ರೀತಿಯ ಟೈಮ್ ಬೌಂಡ್ ನಿಯಮಾವಳಿಗಳು ಇಲ್ಲದೆ ವಿದ್ಯುತ್ ನಿಲುಗಡೆ ಮಾಡಿದರೆ ಸಾಮಾನ್ಯ ಜನರ ವ್ಯವಸ್ಥೆ ಹೇಗೆ? ಸರ್ಕಾರ ಇರುವುದು ಜನರ ಅನುಕೂಲಕ್ಕೋಸ್ಕರ, ಇದು ಜನರಿಂದ ಆಯ್ಕೆಯಾದ ಸರ್ಕಾರ. ಶ್ರೀಸಾಮಾನ್ಯನಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸುವುದಕ್ಕೆ ಸಾಧ್ಯವಾಗದೇ ಹೋದರೆ ಸರ್ಕಾರ ಇದ್ದು ಏನು ಪ್ರಯೋಜನ? ಆಮೇಲೆ, ಡೆಪಾಸಿಟ್ ವಸೂಲು ಮಾಡುವಂಥ ಸಂದರ್ಭದಲ್ಲಿ

ಒಂದು ಕ್ಲಾಸ್ ಹಾಕಿದ್ದಾರೆ, ಅದೇನೆಂದರೆ, ಜನರು ಕೆ.ಇ.ಬಿ.ಗೆ, ಕೊಡತಕ್ಕಂಥ ಡೆಪಾಸಿಟ್ ಹಣವನ್ನು ನೀವು ವಿದ್ಯುತ್ ಬೇಡ ಎಂದ ದಿವಸ ವಾಪಸ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಆಗಿಹೋಗುವಂಥ ಮಾತಲ್ಲವಾದ್ದರಿಂದ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡಬೇಕು. ವಿದ್ಯುತ್ ಇಲ್ಲದೆ ಇವತ್ತು ಜನಜೀವನ ಇಲ್ಲ. ಯಾವ ಮನೆಗೇ ಆದರೂ ವಿದ್ಯುತ್ ಇಲ್ಲದೆ ಕೆಲಸವಾಗುವುದಿಲ್ಲ. ಆದ್ದರಿಂದ, ಡೆಪಾಸಿಟ್ ಹಣವನ್ನು ವಾಪಸ್ ಪಡೆಯುವಂತಹ ಪ್ರಶ್ನೆಯೇ ಬರುವುದಿಲ್ಲ. ಆದುದರಿಂದ, ಈ ಕಂಡೀಷನ್ ಏಕೆ? ಇದು ಜನರಿಗೆ ಮೋಸ ಮಾಡುವಂಥ ವಿಚಾರವಾಗಿದೆ. ಆದ್ದರಿಂದ, ಇದರ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ಈ ಸರ್ಕಾರ ಕೊನೆ ಘಳಿಗೆಯಲ್ಲಾದರೂ ಜನರುಗಳಿಗೆ ಸರಿಯಾದ ರೀತಿಯಲ್ಲಿ ವಿದ್ಯುತ್‌ನ್ನು ಸರಬರಾಜು ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೇಳುತ್ತಿದ್ದೇನೆ. ಈ ವರ್ಷ ಚೆನ್ನಾಗಿ ಮಳೆ ಬಂದು ಎಲ್ಲಾ ಜಲಾಶಯಗಳು ತುಂಬಿದ್ದರೂ ಸಹಾ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆಯೆಂದು ಹೇಳುವುದು ಸರಿಯಲ್ಲ. ನಿಜವಾಗಿ ಎಲ್ಲಿ ತೊಂದರೆಯಾಗುತ್ತಿದೆ? ಎಲ್ಲಿ ಲೋಪದೋಷ ಉಂಟು? ಎಂಬುದನ್ನು ಸರ್ಕಾರದಲ್ಲಿ ಪತ್ತೆ ಹಚ್ಚಿ ಸರಿಪಡಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ, ಈ ಮಂಡಳಿಯನ್ನು ದಯವಿಟ್ಟು ಖಾಸಗಿಯವರಿಗೆ ಒಪ್ಪಿಸುವುದು ಒಳ್ಳೆಯದು. ರೈತರ ಶೋಷಣೆ ಮಾಡುವುದಕ್ಕೋಸ್ಕರ ಈ ಇಲಾಖೆಯನ್ನು ಸರ್ಕಾರದಲ್ಲೇ ಇಟ್ಟುಕೊಳ್ಳುವುದು ಬೇಡ. ವಿದ್ಯುತ್ ಉತ್ಪಾದನೆಗಾಗಿ ಕರಾವಳಿ ಪ್ರದೇಶದ ನಾಲ್ಕು ಕಡೆ ಬಾರ್ಜ್ ಮೌಂಟೆಡ್ ವಿದ್ಯುತ್ ಘಟಕಗಳನ್ನು ಮಾಡಲಾಗುತ್ತದೆಂದು ಈ ಹಿಂದೆ ಹೇಳಲಾಗಿತ್ತು, ಆದರೆ, ಇದರ ಬಗ್ಗೆ ಯಾವುದೇ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಉಷ್ಣ ವಿದ್ಯುತ್ ಸ್ಥಾವರದ ಬಗ್ಗೆಯೂ ಹೇಳಿಕೆಯಿಲ್ಲ, ಕೊಜೆಂಟ್ರಿಕ್ಸ್ ಬಗ್ಗೆಯೂ ಹೇಳಿಕೆಯಿಲ್ಲ. ಎಲ್ಲವೂ 'ಇಂಗು ತಿಂದ ಮಂಗನ ಹಾಗೆ' ಆಗಿದೆ ಈ ಸರ್ಕಾರ. ಪ್ರಾರಂಭದಲ್ಲಿ ಕೊಜೆಂಟ್ರಿಕ್ಸ್ ಬಗ್ಗೆ ಬಹಳಷ್ಟು ಹೇಳಿಕೊಂಡು ಬಂದರು, ಆದರೆ, ಇವತ್ತಿನವರೆಗೂ ಅದು ಏನೂ ಆಗಲಿಲ್ಲ. ಜನರ ವಿರುದ್ಧ ಸರ್ಕಾರ ಕಾರ್ಯಾಚರಣೆಯನ್ನು ಮಾಡಿದ್ದರೂ ಇವತ್ತಿನವರೆಗೂ ಕೊಜೆಂಟ್ರಿಕ್ಸ್ ಸ್ಥಾಪನೆ ಮಾಡಲಿಕ್ಕಾಗಲಿಲ್ಲ.

ಆಮೇಲೆ, ರಾಜ್ಯಪಾಲರ ಭಾಷಣದಲ್ಲಿ ಮಹಿಳಾ ಅಭಿವೃದ್ಧಿಯ ಬಗ್ಗೆ ಕೆಲವು ವಿಷಯಗಳು ಉಲ್ಲೇಖವಾಗಿವೆ. 'ದೇಶದಲ್ಲಿ ಮೊದಲಬಾರಿಗೆ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯನ್ನು ನನ್ನ ಸರ್ಕಾರ ಜಾರಿಗೆ ತಂದಿದೆ' ಅದರ ಅಡಿಯಲ್ಲಿ ಫಲಾನುಭವಿಗಳ ಆಧಾರಿತದ ದುಡಿಮೆ ಉದ್ದೇಶ ಇತ್ಯಾದಿಗಳನ್ನು ಹೇಳಿಕೊಂಡು 174 ವಿವಿಧ ಯೋಜನೆಗಳ ಅಡಿಯಲ್ಲಿ 211.22 ಕೋಟಿ ರೂ.ಗಳ ಹಣವನ್ನು ಕೊಡಸಿದ್ದು ಈ ಯೋಜನೆಗಳಡಿಯಲ್ಲಿ 195.97 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ನಾನು ಇದರ ಸತ್ಯಾಸತ್ಯತೆ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ. ಪ್ರಾಮಾಣಿಕವಾಗಿ ಇದು ಆಯಾ

ಘಟಕಕ್ಕೆ ಮುಟ್ಟಲಿಲ್ಲ. ತರಬೇತಿಗಳು ಮತ್ತು ಬೇರೆ ಬೇರೆ ಯೋಜನೆಗಳ ಬಗ್ಗೆ ಇಲಾಖೆಗಳಲ್ಲಿ ಇದಕ್ಕೆ ಸಂಬಂಧಪಟ್ಟ ಅರ್ಜಿಗಳು ಸಿಕ್ಕುತ್ತಾ ಇಲ್ಲ. ಎಂ.ಎಲ್.ಎ.ಗಳು ಮತ್ತು ಉನ್ನತ ಅಧಿಕಾರಿಗಳು ಕೇಳಿದರೆ ಮಾತ್ರ ಮಹಿಳಾ ಅಭಿವೃದ್ಧಿಗೆ ಸಂಬಂಧಪಟ್ಟಂಥ ಅರ್ಜಿಗಳು ಸಿಕ್ಕುತ್ತವೆ. ಇದರಲ್ಲಿ ಒಂದೆರಡು ಕಾರ್ಯಕ್ರಮಗಳನ್ನು ಬಿಟ್ಟರೆ ಉಳಿದ ಯಾವ ಕಾರ್ಯಕ್ರಮಗಳ ಬಗ್ಗೆಯೂ ಮಹಿಳೆಯರಿಗೆ ಪರಿಚಯವಾಗಲೇ ಇಲ್ಲ. ಈ ಕಾರ್ಯಕ್ರಮಗಳ ಬಗ್ಗೆ ಮಹಿಳೆಯರಿಗೆಲ್ಲಾ ಗೊತ್ತಾಗುವುದಕ್ಕಾಗಿ ಪ್ರಚಾರ ಮಾಡುವ ಸಲುವಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ? ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಮಹಿಳೆಯರಿಗೆ ಈ ಕಾರ್ಯಕ್ರಮಗಳ ಬಗ್ಗೆ ಏನೂ ಗೊತ್ತಿಲ್ಲ. ಗೊತ್ತಿದ್ದರೂ ಅರ್ಜಿಗಳು ಎಲ್ಲಿ ಸಿಗುತ್ತವೆಂದು ಗೊತ್ತಿಲ್ಲ. ಜೊತೆಗೆ ಅರ್ಜಿಗಳೂ ಸಿಗುತ್ತಿಲ್ಲ. ಆದುದರಿಂದ, ಇನ್ನೂರು, ಮುನ್ನೂರು ಕೋಟಿ ಯೋಜನೆಗಳ ಬಗ್ಗೆ ಏನು ಹೇಳಲಾಗಿದೆಯೋ ಅದು ಸಾಮಾನ್ಯ ಜನರಿಗೆ ಮುಟ್ಟುತ್ತಿಲ್ಲವಾದ್ದರಿಂದ, ಇದರ ಬಗ್ಗೆ ದಯವಿಟ್ಟು ಸರ್ಕಾರ ಚಿಂತನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಆಮೇಲೆ ರಸ್ತೆ ಸಾರಿಗೆ ವಿಷಯವನ್ನು ಕೆಲವು ಮಾತುಗಳನ್ನು ಹೇಳುತ್ತೇನೆ. ಇವತ್ತಿನ ದಿವಸಗಳಲ್ಲಿ ರಸ್ತೆ ಸಾರಿಗೆ ನಿಗಮದಲ್ಲಿ ಕೆಲಸ ಮಾಡತಕ್ಕಂಥ ಚಾಲಕರ ನಿರ್ಲಕ್ಷ್ಯತನದಿಂದ ನೂರಾರು ಜನ ಅಪಘಾತಕ್ಕೀಡಾಗಿ ಸಾವನ್ನಪ್ಪಿದ್ದಾರೆ. ಮುಖ್ಯವಾಗಿ ಹೇಳುವುದಾದರೆ, ಲಾರಿ, ಆಟೋ, ಟೆಂಪೋಗಳನ್ನು ಓಡಿಸುತ್ತಿದ್ದವರೆಲ್ಲಾ ಹಣ ಕೊಟ್ಟೋ ಅಥವಾ ಪ್ರಭಾವ ಬೀರಿಯೋ ಕೆ.ಎಸ್.ಆರ್.ಟಿ.ಸಿ.ಯಲ್ಲಿ ನೌಕರಿ ಪಡೆದುಕೊಂಡು ಸಾರ್ವಜನಿಕರ ಜೀವನದೊಡನೆ ಚೆಲ್ಲಾಟವಾಡುತ್ತಿದ್ದಾರೆ. ದಿನಾಂಕ: 1-11-1997ರಿಂದ ರಸ್ತೆ ಸಾರಿಗೆ ಸಂಸ್ಥೆಯನ್ನು ಖಾಸಗಿಯವರಿಗೆ ವಹಿಸಿಕೊಡಲಾಗುತ್ತದೆಂದು ಮಾನ್ಯ ಮಂತ್ರಿಯವರು ಬಹಳ ವೀರಾವೇಶದಿಂದ ಹೇಳಿಕೊಂಡಿದ್ದರು. ಇನ್ನೊಂದು ಕಡೆಯಲ್ಲಿ ಇದರ ಬಗ್ಗೆ ತಮ್ಮ ಅಸಹಾಯಕತೆಯನ್ನೂ ತೋಡಿಕೊಂಡಿದ್ದಾರೆ. ಗೂಂಡಾ ಚಟುವಟಿಕೆಯಲ್ಲಿ ತೊಡಗಿರುವ ಸಿಬ್ಬಂದಿಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗುತ್ತದಾ? ಮಂತ್ರಿಗಳಿಗೇ ಅವರು ಪ್ರಾಣ ಬೆದರಿಕೆ ಹಾಕಿರುವುದರಿಂದ ಈ ಕೆ.ಎಸ್.ಆರ್.ಟಿ.ಸಿ., ಸಂಸ್ಥೆಯನ್ನು ರಾಜ್ಯ ಸರ್ಕಾರದಿಂದ ನಡೆಸಲು ಸಾಧ್ಯವಾಗುತ್ತದಾ? ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಮಂಗಳೂರಿಗೆ ಬಂದಂಥ ಸಂದರ್ಭದಲ್ಲಿ ಈ ಸಂಸ್ಥೆಯನ್ನು ಖಾಸಗಿಯವರಿಗೆ ಕೊಡಲಾಗುತ್ತದೆಂದು ಹೇಳಿದ್ದರು. ಅದರ ಬಗ್ಗೆ ಇವತ್ತಿನವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇನ್ನು ಮುಂದಾದರು ಮಾನ್ಯ ಮಂತ್ರಿಯವರು ಈ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು. ಆಮೇಲೆ ಬೆಲೆ ಏರಿಕೆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಮಾತುಗಳೂ ಇಲ್ಲ. ಹಸಿರು ಕಾರ್ಡಿಗೆ ಸಿಗುವಂತಹ ದವಸಧಾನ್ಯಗಳಾದ ಅಕ್ಕಿ, ಗೋಧಿಯಿಂದ ಹಿಡಿದು ಸಾಮಾನ್ಯ ವ್ಯಕ್ತಿ ಮುಕ್ತ ಮಾರುಕಟ್ಟೆಯಲ್ಲಿ ತೆಗೆದುಕೊಳ್ಳುವ ಯಾವುದೇ ನಿತ್ಯೋಪಯೋಗಿ ವಸ್ತುಗಳ ಬೆಲೆ

ಗಗನಕ್ಕೆ ಮುಟ್ಟಿದೆ. ಇದರ ಬಗ್ಗೆ ಯಾವುದೇ ರೀತಿಯಲ್ಲಿ ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬಗ್ಗೆ ರಾಜ್ಯ ಸರ್ಕಾರದಲ್ಲಿ ಕಾರ್ಯಕ್ರಮಗಳಿಲ್ಲ. ಕಳಪೆ ಅಕ್ಕಿ ನಿರ್ವಹಣೆ, ಬಹಿರಂಗ ಮಾರುಕಟ್ಟೆಯಲ್ಲಿ ಬೆಲೆಗಳು ಜಾಸ್ತಿಯಾಗುವುದು ಅಥವಾ ಸರ್ಕಾರದಲ್ಲಿ ಯಾವುದೇ ನಿಯಂತ್ರಣ ಇಲ್ಲದಿರುವುದು ಜೊತೆಗೆ ಪೂರ್ಣ ಪ್ರಮಾಣದಲ್ಲಿ ಪಡಿತರ ವ್ಯವಸ್ಥೆ ಇಲ್ಲದಿರುವುದರಿಂದ ಇವತ್ತು ಜನರು ಹತಾಶರಾಗಿದ್ದಾರೆ. ನಾನು ತಮ್ಮಲ್ಲಿ ಇಷ್ಟನ್ನು ವಿನಂತಿ ಮಾಡುತ್ತಿದ್ದೇನೆ, 1983ನೇ ಇಸವಿಯಲ್ಲಿ ಜನತಾದಳ ಇದ್ದಾಗ ಭಾರತೀಯ ಜನತಾದಪಾರ್ಟಿಯ 18 ಜನ ಶಾಸಕರು ತಮ್ಮನ್ನು ಅಧಿಕಾರದ ಗದ್ದುಗೆಯಲ್ಲಿ ಕುಳ್ಳಿರಿಸಿದ್ದರು. ಅಲ್ಲಿಂದ ತಾವು ಪ್ರಾಮಾಣಿಕವಾಗಿ ಅಧಿಕಾರದಲ್ಲಿ ಮುಂದೆ ಬಂದಿದ್ದೀರಿ. ಇವತ್ತಿನ ನಿಮ್ಮ ಶ್ರೀಮಂತಿಕೆ ಈ ಜನರಿಗೆ ಬೇಡ. 1998ರ ಶ್ರೀಮಂತಿಕೆಯನ್ನು ತಾವು ದಯವಿಟ್ಟು ಕೊಡಬೇಡಿ, ಆದರೆ 1983ರಲ್ಲಿ ಇದ್ದಂತಹ ಬಡತನವನ್ನು ನಮಗೆ ಕೊಡಿ. ತಾವು ದಯಮಾಡಿ ಇಷ್ಟನ್ನಾದರೂ ಮಾಡಿ. ಬೆಲೆ ಏರಿಕೆಯನ್ನು ನಿಯಂತ್ರಣ ಮಾಡಿ ಅದನ್ನು ಹದ್ದುಬಸ್ತಿನಲ್ಲಿಡುವ ದೃಷ್ಟಿಯಲ್ಲಿ ನೀವು ನಿಮ್ಮ ಅಸಹಾಯಕತೆಯನ್ನು ತೋರ್ಪಡಿಸಿರುವುದರಿಂದ ಇವತ್ತಿನ ಶ್ರೀಮಂತಿಕೆಗೆ ಏನೂ ಬೆಲೆ ಇಲ್ಲ. ಆದುದರಿಂದ ಇವತ್ತಿನ ಶ್ರೀಮಂತಿಕೆ ನಮಗೆ ಬೇಡ. ತಾವು ದಯಮಾಡಿ 1983ರಿಂದ 1985ರ ಅವಧಿಯಲ್ಲಿ ಇದ್ದಂತಹ ಬಡತನವನ್ನು ಈ ಜನರಿಗೆ ಕೊಟ್ಟು ಬಿಡಿ. ಅಷ್ಟನ್ನು ಮಾಡಿದರೆ ಜನರಿಗೆ ತಾವು ಪ್ರಾಮಾಣಿಕವಾಗಿ ಉಪಕಾರ ಮಾಡಿದಂತಾಗುತ್ತದೆ. ಇನ್ನು ಕರಾವಳಿ ಮೀನುಗಾರಿಕೆಯ ಬಗ್ಗೆ ಹೇಳುವುದಾದರೆ ಸುಮಾರು ನಾಲ್ಕು ಲಕ್ಷ ಮೀನುಗಾರರು ಕರಾವಳಿ ಮೀನುಗಾರಿಕೆಯಲ್ಲಿ ತೊಡಗಿದ್ದಾರೆ. ಹೀಗಾಗಿ ನಾಲ್ಕು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವಂತಹ ಒಂದು ದೊಡ್ಡ ಮೀನುಗಾರಿಕೆ ಸುಮಾರು 300 ಕಿಲೋಮೀಟರ್ ಉದ್ದದ ಕರಾವಳಿಯಲ್ಲಿ ನಡೆಯುತ್ತಿದೆ. ಆದರೆ ಅದರ ನಿತ್ಯ ಸಮಸ್ಯೆಗಳ ಬಗ್ಗೆ ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಇವತ್ತು ಕೇರಳ ಸರ್ಕಾರವಾಗಲಿ, ಕರಾವಳಿ ಪ್ರದೇಶದಲ್ಲಿರುವ ಇತರ ಯಾವುದೇ ರಾಜ್ಯ ಸರ್ಕಾರಗಳಾಗಲಿ ಕೇಂದ್ರ ಸರ್ಕಾರದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಜನಹಿತ ಕಾರ್ಯಕ್ರಮಗಳನ್ನು ರಚಿಸಿಕೊಂಡಿವೆ. ಆದರೆ ಕರ್ನಾಟಕ ರಾಜ್ಯ ಸರ್ಕಾರ ಇವತ್ತಿಗೂ ಕೂಡ ಮೀನುಗಾರರ ಬಗ್ಗೆ ಅಥವಾ ಸಮುದ್ರ ಕೊರೆತದ ಬಗ್ಗೆ ಇನ್ನೂ ಕೂಡ ಕೇಂದ್ರದ ಸಂಪನ್ಮೂಲಗಳನ್ನು ಪ್ರಾಮಾಣಿಕವಾಗಿ ಒದಗಿಸಿಕೊಳ್ಳುವಲ್ಲಿ ಅವರು ಒಳ್ಳೆಯ ಫಲಿತಾಂಶವನ್ನು ಪಡೆದಿಲ್ಲವೆಂದು ವಿಷಾದದಿಂದ ನಾನು ಹೇಳುತ್ತಿದ್ದೇನೆ. ಏಕೆಂದರೆ ಇವತ್ತು ಗಿಲ್‌ನೆಟ್ ಮೀನುಗಾರರೂ ಕೂಡ ಇದ್ದಾರೆ. ಸುಮಾರು ನಾಲ್ಕು ಸಾವಿರ ದೋಣಿಗಳು ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ತೊಡಗಿವೆ. ಕೇರಳದಲ್ಲಿ ಪಡಿತರ ವ್ಯವಸ್ಥೆಯಲ್ಲಿ ಈ ದೋಣಿಗಳಿಗೆ ಒಂದು ದಿವಸಕ್ಕೆ ಸುಮಾರು 40 ಲೀಟರ್ ಸೀಮೆಎಣ್ಣೆಯನ್ನು ಒದಗಿಸಲಾಗುತ್ತಿದೆ. ಆದರೆ ಇವತ್ತಿನವರೆಗೆ ಕರ್ನಾಟಕ ಸರ್ಕಾರ ಇದರ ಬಗ್ಗೆ ಯಾವುದೇ ವ್ಯವಸ್ಥೆಯನ್ನು ಮಾಡಲಿಲ್ಲ. ಸಾಮಾನ್ಯ ಜನರಿಗೆ ಸಿಗುವಂತಹ ಪಡಿತರ ವ್ಯವಸ್ಥೆಯಲ್ಲಿ ಈ ಮೀನುಗಾರರಿಗೆ ಒಂದು ದಿವಸಕ್ಕೆ 5 ಲೀಟರ್ ಸೀಮೆಎಣ್ಣೆ

ಒದಗಿಸುವಂತಹ ಒಂದು ವ್ಯವಸ್ಥೆ ಕೂಡ ಇಲ್ಲ. ರಾಜೀವ್‌ಗಾಂಧಿ ಪ್ರತಿಷ್ಠಾನ ಯೋಜನೆ ಅಡಿಯಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆಗೋಸ್ಕರ ನಮ್ಮ ಕ್ಷೇತ್ರದಿಂದ ನಾನು ದೆಹಲಿಗೆ ಹೋಗಿದ್ದಂತಹ ಸಂದರ್ಭದಲ್ಲಿ ಅಲ್ಲಿನ ಕಾರ್ಯದರ್ಶಿಯವರು ನಿಮ್ಮ ಕರ್ನಾಟಕ ರಾಜ್ಯದ ಐ.ಎ.ಎಸ್.ಅಧಿಕಾರಿಗಳನ್ನು ಹಲವಾರು ಸಲ ಭೇಟಿ ಮಾಡುವ ಸಲುವಾಗಿ ಬೆಂಗಳೂರಿಗೆ ಬಂದು ಮೀಟಿಂಗ್ ನಡೆಸಿದ ನಂತರ ನಿಮ್ಮಲ್ಲಿಂದ ಬೇರೆ ಬೇರ ಪ್ರಾಜೆಕ್ಟ್‌ಗಳು ಬರುತ್ತಿವೆ. ಅದುವರೆಗೆ ಯಾವುದೇ ಪ್ರಾಜೆಕ್ಟ್‌ಗಳಾಗಿರಲಿಲ್ಲ ಎಂದು ಬಹಳ ವಿಷಾದದಿಂದ ಹೇಳಿದರು. ಬೇರೆ ಬೇರೆ ರಾಜ್ಯಗಳು ಬೇರೆ ಬೇರೆ ವಿಚಾರದಿಂದ ಇದನ್ನು ಬಹಳಷ್ಟು ಸದುಪಯೋಗ ಪಡಿಸಿಕೊಂಡಿವೆ. ಆದರೆ ನಮ್ಮಲ್ಲಿ ಅಂತಹ ಐ.ಎ.ಎಸ್ ಅಧಿಕಾರಿಗಳು, ತಿಳುವಳಿಕೆ ಇರುವಂತಹ ತಜ್ಞರು ದೊಡ್ಡ ಪ್ರಮಾಣದಲ್ಲಿಲ್ಲವೆ? ಇವತ್ತು ಕೇಂದ್ರ ಸರ್ಕಾರದಲ್ಲಿರುವಂತಹ ಸಂಪನ್ಮೂಲಗಳನ್ನು ನಮ್ಮ ರಾಜ್ಯಕ್ಕೆ ತರುವಂತಹ ದೃಷ್ಟಿಯಲ್ಲಿ ಏನು ಕಾರ್ಯಕ್ರಮ ಇದೆ, ಏನು ವ್ಯವಸ್ಥೆ ಇದೆ? ಸಮುದ್ರ ಕೊರೆತದಿಂದಾಗುವ ತೊಂದರೆಯನ್ನು ತಪ್ಪಿಸುವ ಸಲುವಾಗಿ ತಡೆಗೋಡೆಯನ್ನು ನಿರ್ಮಿಸುವ ಬಗ್ಗೆ ನಮ್ಮ ರಾಜ್ಯ ಸರ್ಕಾರ ಇದುವರೆಗೂ ಕಾಳಜಿ ವಹಿಸುತ್ತಿಲ್ಲ. ಇವತ್ತಿಗೂ ಕೂಡ ಆ ಕಾಮಗಾರಿಗಳಿಗಾಗಿ ತೆಗೆದುಕೊಂಡ 8 ಕೋಟಿ ರೂಪಾಯಿಗಳನ್ನು ಇನ್ನೂ ಬಿಡುಗಡೆ ಮಾಡಲಿಲ್ಲ. ಇವತ್ತಿಗೂ ಕೂಡ ಮೀನುಗಾರರ ಬಗ್ಗೆ, ಮೀನುಗಾರರ ಜೀವನದ ಬಗ್ಗೆ ತಮಗೆ ಯಾವುದೇ ರೀತಿಯ ಕಾಳಜಿ ಇಲ್ಲ., ಸರ್ಕಾರದಿಂದ ಸುಮಾರು ಒಂಭೈನೂರು ಕೋಟಿ ರೂಪಾಯಿ ವಿದೇಶಿ ವಿನಿಮಯ ಈ ಮೀನುಗಾರಿಕೆಯಿಂದ ಗಳಿಕೆಯಾಗುತ್ತಿದೆ. ಈ ಮೀನುಗಾರರ ಜೀವನದ ಬಗ್ಗೆ ಏನು ವ್ಯವಸ್ಥೆಯಾಗಿದೆ? ಈ ವರ್ಷ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಐದು ಸಾವಿರ ಮನೆಗಳನ್ನು ಮೀನುಗಾರರಿಗೆ ನಿರ್ಮಿಸಿ ಕೊಡುತ್ತೇವೆ ಎಂದು ಹೇಳಲಾಗಿದೆ. ನಾನು ಈ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕರಾವಳಿ ತೀರದಲ್ಲಿ, ಸಮುದ್ರದ ಬದಿಯಲ್ಲಿ ಮೀನುಗಾರರನ್ನು ಹೊರತುಪಡಿಸಿ ಇತರರಿಗೆ ಮನೆ ಕಟ್ಟಿಕೊಳ್ಳಲು ಅವಕಾಶ ಕೊಡಬೇಡಿರಿ. ಮೀನುಗಾರರಿಗೆ ಮಾತ್ರ ಅಲ್ಲಿ ಹಕ್ಕುಪತ್ರಗಳನ್ನು ಕೊಡಿ. ಬೀಡಿ ಕಾರ್ಮಿಕರಿಗೆ, ಕೃಷಿ ಕೂಲಿ ಕಾರ್ಮಿಕರಿಗೆ ಕರಾವಳಿ ತೀರದಲ್ಲಿ ಏನು ಕೆಲಸ? ಅವರೆಲ್ಲರೂ ಬಂದು ಅಲ್ಲಿ ಮನೆ ಕಟ್ಟಿಕೊಂಡು ಮಳೆಗಾಲದಲ್ಲಿ ಮನೆ ಹೋಯಿತು ಎಂದು ಸರ್ಕಾರದಿಂದ ಪರಿಹಾರ ಕೇಳುತ್ತಿದ್ದಾರೆ. ಆದರೆ ಯಾರಿಗೆ ಪರಿಹಾರ ಸಿಗಬೇಕು ಎಂದರೆ ಯಾರು ಕರಾವಳಿ ತೀರದಲ್ಲಿ ಮೀನುಗಾರರಿದ್ದಾರೆ ಅವರಿಗೆ ಆ ಪರಿಹಾರ ಸಿಗಬೇಕು. ಆದರೆ ಅವರಿಗೆ ಅದು ಸಿಗುತ್ತಿಲ್ಲ. ಇದರ ಬಗ್ಗೆ ನೀವು ಸರ್ವೆ ಮಾಡಬೇಕು. ಮೀನುಗಾರರ ಹಿತರಕ್ಷಣೆ ಮಾಡಿ ಅವರಿಗೆ ಸೂಕ್ತ ವ್ಯವಸ್ಥೆಯಲ್ಲಿ ಮನೆ ಕಟ್ಟಿಕೊಡಬೇಕು. ಕಳೆದ ಸಲ ಒಂದು ಸಾವಿರ ಮನೆಗಳನ್ನು ಕೊಟ್ಟಿದ್ದೀರಿ. ಆದರೆ ಕರಾವಳಿ ತೀರದಲ್ಲಿ ಅವುಗಳನ್ನು ಕೊಡಲಿಲ್ಲ. ಇವತ್ತು 5 ಸಾವಿರ ಮನೆ ಕಟ್ಟಿಕೊಡಬೇಕೆಂದು ಲೆಕ್ಕ ಇಟ್ಟುಕೊಂಡಿದ್ದೀರಿ ಅದರ ಪ್ರಮಾಣವನ್ನು ಜಾಸ್ತಿ ಮಾಡಿ ಪ್ರಾಮಾಣಿಕವಾಗಿ ಕರಾವಳಿಯ ಮೀನುಗಾರರಿಗೆ ಇದನ್ನು ಕೊಡುವಂತಹ ವ್ಯವಸ್ಥೆ ಮಾಡಿ. ಅದರ ಜೊತೆಗೆ ಕರಾವಳಿ

ತೀರದ ಬಂದರು ಪ್ರದೇಶದಲ್ಲಿ ಹೂಳೆತ್ತುವ ವ್ಯವಸ್ಥೆಯನ್ನು ಮಾಡಿ. ಸುಮಾರು ಎರಡು ವರ್ಷದಿಂದೀಚೆಗೆ ಈ ಹೂಳೆತ್ತುವ ವ್ಯವಸ್ಥೆ ಆಗುತ್ತಿದೆ. ಇದರಿಂದ ಕಳೆದ ಮೂರು ನಾಲ್ಕು ವರ್ಷಗಳ ಹಿಂದೆ ಅಳಿಯಬಾಗಿಲಿನಲ್ಲಿ ಆಗುತ್ತಿದ್ದಂತಹ ಮರಣದ ಪ್ರಮಾಣ ಈಗ ಕಡಿಮೆಯಾಗಿದೆ. ಆದರೆ ಈ ವರ್ಷದಿಂದ ಹೂಳೆತ್ತುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿದ್ದರೆ ಪುನಃ ತೊಂದರೆ ಆಗುವ ಸಾಧ್ಯತೆ ಇದೆ. ಆದುದರಿಂದ ತಾವು ಸಮುದ್ರ ತೀರದ ಕರಾವಳಿ ಪ್ರದೇಶದಲ್ಲಿ ಈ ಹೂಳೆತ್ತುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಜೊತೆಗೆ ಮಾನ್ಯ ವಿದ್ಯಾ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಹೈಸ್ಕೂಲ್‌ಗಳನ್ನು ಒದಗಿಸಿ ಕೊಟ್ಟಿದ್ದಾರೆ. ಇದಕ್ಕಾಗಿ 9 ಲಕ್ಷ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಿರಿ. ಆದರೆ ಅದು ಇನ್ನೂ ಬಿಡುಗಡೆಯಾಗಿಲ್ಲ. ಸಚಿವರು ಹಣ ಬಿಡುಗಡೆಯಾಗಿ ಬಂದಿದೆ ಎಂದು ಹೇಳುತ್ತಾರೆ. ಆದರೆ ಕಟ್ಟಡ ಕಟ್ಟಿದಂತಹ ಶಾಲಾಭಿವೃದ್ಧಿ ಸಮಿತಿಯವರಿಗೆ ಇವತ್ತಿಗೂ ಕೂಡ ಹಣ ಬಂದಿಲ್ಲ. ನಾವು ಕೊಟ್ಟಿರುವ ನಕ್ಷೆ ಪ್ರಕಾರ ಕಟ್ಟಡ ನಿರ್ಮಾಣವಾದರೆ ಮಾತ್ರ ಹಣ ಬಿಡುಗಡೆ ಮಾಡಲಾಗುವುದೆಂದು ಅವರು ಹೇಳಿದ್ದಾರೆ. ನಾನು ಈ ವಿಚಾರವನ್ನು ನಿನ್ನೆ ಕನ್‌ಫರ್ಮ್ ಮಾಡಿಕೊಂಡು ಇವತ್ತು ತಮ್ಮಲ್ಲಿ ಹೇಳುತ್ತಿದ್ದೇನೆ. ಇಲಾಖೆಯವರೂ ಕೂಡ ಹಣ ಬಿಡುಗಡೆಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಇದರ ಜೊತೆಗೆ ಅಲ್ಲಿ ತರಗತಿಗಳನ್ನೂ ಕೂಡ ಒದಗಿಸುತ್ತಿದ್ದಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ನೀವು ಎಲ್ಲಾ ಮಾಹಿತಿಗಳನ್ನೂ ಬರವಣಿಗೆಯಲ್ಲಿ ಒದಗಿಸಿರುವಿರಾ? ದಯವಿಟ್ಟು ಆ ಬಗ್ಗೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಕೇಳಿ. ಅಲ್ಲಿಗೆ ಅಮೌಂಟ್ ಹೋಗಿದೆ.

ಶ್ರೀ ಕೆ.ಜಯರಾಮಶೆಟ್ಟಿ: ಇದರ ಜೊತೆಗೆ ಹೈಸ್ಕೂಲ್ ಮತ್ತು ಪ್ರಾಥಮಿಕ ಶಾಲೆಗಳಿಗೆ ಕೊಠಡಿಗಳನ್ನು ಒದಗಿಸುತ್ತಿದ್ದೀರಿ. ಆದರೆ ಬಹಳಷ್ಟು ವರ್ಷಗಳಿಂದ ದುರಸ್ಥಿ ಆಗದೆ ಇರುವಂತಹ ಶಾಲಾ ಕೊಠಡಿಗಳ ರಿಪೇರಿ ಕಡೆಗೆ ಹಾಗೂ ಅವುಗಳಿಗೆ ಬೇಕಾದ ಕಿಟಕಿ ಬಾಗಿಲುಗಳು, ಮೇಜು ಡೆಸ್ಕುಗಳ ಸರಬರಾಜಿನ ಬಗ್ಗೆ ಕೂಡ ಸರ್ಕಾರ ಮೌನ ವಹಿಸಿದೆ. ನೀವು ಕೊಡುವಂತಹ ಸಣ್ಣ ಮೊತ್ತದ ಹಣ ಯಾವುದೇ ಮೂಲೆಗೂ ಸಾಕಾಗುವುದಿಲ್ಲ. ಹೊಸ ಕಟ್ಟಡವನ್ನು ಕಟ್ಟಿಕೊಡಬಹುದು. ಅದಕ್ಕೆ ಬೇಕಾದ ಡೆಸ್ಕುಗಳು ಮೇಜುಗಳು ಅಥವಾ ಉಪಕರಣಗಳನ್ನು ಒದಗಿಸಲು ಅಷ್ಟೇ ಪ್ರಮಾಣದಲ್ಲಿ ಹಣ ಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಶಾಲಾಭಿವೃದ್ಧಿ ಸಮಿತಿಯವರಿಂದ ಇದನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲವಾದುದರಿಂದ ತಾವು ತಮ್ಮ ಮುಂದಿನ ವರ್ಷದ ಆಯವ್ಯಯ ಪಟ್ಟಿಯಲ್ಲಿ ಈ ಬಗ್ಗೆ ಆಲೋಚನೆ ಮಾಡಿ, ಆ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇದರ ಜೊತೆಗೆ ನಮ್ಮ ಗಡಿನಾಡ ಕನ್ನಡಿಗರ ಬಗ್ಗೆ ಈಗ ನಾನು ಉಲ್ಲೇಖ ಮಾಡುತ್ತಿದ್ದೇನೆ. ರಾಜ್ಯ ಸರ್ಕಾರ ಬಹುಶಃ ಕಾಸರಗೋಡನ್ನು ಪೂರ್ಣ ಪ್ರಮಾಣದಲ್ಲಿ ಮರೆತಿದೆ.

ಮಹಾಜನ್ ಆಯೋಗದ ವರದಿ ಬಗ್ಗೆ ಆಗಾಗ ಉಲ್ಲೇಖವಾದರೂ ಸಹ ಈ ಸದನದಲ್ಲಿ ಬೆಳಗಾವಿಯ ವಿಚಾರವನ್ನು ಬಿಟ್ಟರೆ ಕಾಸರಗೋಡಿನ ಬಗ್ಗೆ ಯಾವ ಹೇಳಿಕೆಯೂ ಬರುವುದಿಲ್ಲ. ಬಹುಶಃ ಬೆಳಗಾಂ ವಿಷಯ ಬಂದರೆ ಅದು ನಮ್ಮ ಅಸ್ತಿತ್ವದಲ್ಲಿದೆ, ಅದನ್ನು ಬಿಟ್ಟು ಕೊಡುವುದು ಅಷ್ಟು ಸುಲಭವಲ್ಲ ಎನ್ನುತ್ತಾರೆ. ಆದರೆ ಕಾಸರಗೋಡನ್ನೂ ಸಹ ನಾವು ಕೇರಳದಿಂದ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಕನ್ನಡ ಕಲಿತ ಅಧ್ಯಾಪಕರಿಗೆ ಮತ್ತು ಶಿಕ್ಷಕರಿಗೆ ಕರ್ನಾಟಕದಲ್ಲಿ ಮತ್ತು ಕೇರಳದಲ್ಲಿ ಕೆಲಸ ಸಿಗುತ್ತಿಲ್ಲ. ಕೇರಳದಲ್ಲಿ ಕಡ್ಡಾಯವಾಗಿ ಮಲೆಯಾಳಂ ಭಾಷೆಯನ್ನು ಕಲಿಯಬೇಕಾಗುತ್ತದೆ, ಕರ್ನಾಟಕದಲ್ಲಿ ಇದು ಹೊರರಾಜ್ಯ ಎಂದು ಆಗುತ್ತದೆ. ಆದುದರಿಂದ ಇದರ ಬಗ್ಗೆ ಸೂಕ್ತ ತಿದ್ದುಪಡಿಗಳು ಮತ್ತು ಸೂಕ್ತ ವ್ಯವಸ್ಥೆಗಳಾಗಬೇಕು. ಆ ಪ್ರದೇಶದ ನಮ್ಮ ಸಹೋದರರಿಗೆ ಜೀವನೋಪಾಯಕ್ಕೆ ತಾವು ವ್ಯವಸ್ಥಿತ ಕ್ರಮವನ್ನು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಕಳೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಂತಹ ಕಯ್ಯಾರ ಕಿಜ್ಞಣರೈನವರು ಕೇರಳದವರು. ಸಾಹಿತಿ ಗೋವಿಂದಪೈ ಅವರು ಕೇರಳದವರು. ಹೀಗೆ ಬಹಳಷ್ಟು ದೊಡ್ಡ ಪ್ರಮಾಣದ ವಿದ್ವಾಂಸರೆಲ್ಲಾ ಕೇರಳದಿಂದ ಬಂದಂಥವರೇ ಆದರೆ ನಮಗೂ ಕೂಡ ನೈತಿಕ ಹಕ್ಕು ಇದೆ. ಆ ವಿಚಾರವನ್ನೂ ನಾವು ಯಾವತ್ತೂ ಬಿಟ್ಟು ಕೊಡದೆ ಅಲ್ಲಿಯ ನಮ್ಮ ಗಡಿನಾಡ ಕನ್ನಡಿಗರಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಲು ರಾಜ್ಯ ಸರ್ಕಾರ ಗಮನ ಹರಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ರಾಜ್ಯದ ಗ್ರಾಮ ಸಹಾಯಕರ ಬಗ್ಗೆ ನಾನು ನಿನ್ನೆ ಕೂಡ ಉಲ್ಲೇಖ ಮಾಡಿದ್ದೆ. ಅನ್ಯಾಯವಾಗಿ ಅಲ್ಲಿ ಐದು ಜನರ ಜೀವ ಬಲಿಯಾಗಿದೆ. ನಾನು ರಾಜ್ಯ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ ನೈಸರ್ಗಿಕ ವಿಕೋಪದಲ್ಲಿ ಯಾರಾದರೂ ಸತ್ತರೆ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೀರಿ. ಆದರೆ ಈ ರಾಜ್ಯ ಸರ್ಕಾರದ ಸೇವೆಯನ್ನು ಕಳೆದ 19 ವರ್ಷಗಳಿಂದ ನಡೆಸಿಕೊಂಡು ಬಂದಂತಹ ಅತ್ಯಂತ ಕೆಳಹಂತದ ನೌಕರರು ಮುಷ್ಕರ ಮಾಡಿ ಅವರಲ್ಲಿ ಐದು ಜನ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ದಯವಿಟ್ಟು ಮಾನವೀಯತೆಯ ದೃಷ್ಟಿಯಿಂದ ಆ 5 ಜನರಿಗೆ ಪರಿಹಾರ ಕೊಡುವ ವಿಚಾರದಲ್ಲಿ ರಾಜ್ಯ ಸರ್ಕಾರ ಪ್ರಾಮಾಣಿಕ ಚಿಂತನೆ ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ. ಪ್ರಕೃತಿ ವಿಕೋಪದಿಂದ ನನ್ನ ಜಿಲ್ಲೆಯಲ್ಲಿ 20 ಕೋಟಿ ರೂಪಾಯಿ ನಷ್ಟವಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಾಗ ಕೂಡ ಅವರ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ಆದರೆ ಅವರು ಒಂದು ಕೋಟಿ 92 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇನ್ನುಳಿದ ಹಣವನ್ನು ಬಿಡುಗಡೆ ಮಾಡುವಲ್ಲಿ ಏನೂ ವ್ಯವಸ್ಥೆ ಆಗಿಲ್ಲ. ಅಲ್ಲಿ ಸೇತುವೆಗಳು ಹಾಳಾಗಿವೆ, ರಸ್ತೆಗಳಿಗೆ ಡಾಂಬರು ಇಲ್ಲದಿರುವ ಕಾರಣ ರಸ್ತೆಗಳು ಹಾಳಾಗಿವೆ. ಆದುದರಿಂದ ಪ್ರಕೃತಿ ವಿಕೋಪದಂತಹ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಅನಾಹುತಗಳಾಗಿರುವುದಕ್ಕೆ ಇನ್ನಾದರೂ ದೊಡ್ಡ ಪ್ರಮಾಣದಲ್ಲಿ ಹಣವನ್ನು

ಬಿಡುಗಡೆ ಮಾಡಬೇಕೆಂದು ಹೇಳಿ ಇವತ್ತು ಈ ರಾಜ್ಯಪಾಲ ಭಾಷಣ ಬಹುಶಃ ಮುಂದಿನ ವರ್ಷದಲ್ಲಾದರೂ ಕೂಡ ನಮಗೆ ಒಂದು ಯೋಗ್ಯ ಮಾರ್ಗದರ್ಶನವಾಗಲಿ. ತಮ್ಮ ಸರ್ಕಾರದಿಂದ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿ ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನನಗೆ ಮಾತನಾಡಲು ಅನುವು ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮೊನ್ನೆ ಗ್ರಾನೈಟ್ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆ ಕಡತಗಳನ್ನು ಅಧ್ಯಕ್ಷರ ಕೊಠಡಿಯಲ್ಲಿ ನೋಡಬೇಕು ಎಂದು ನಿರ್ಣಯ ಆಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈಗ ರೆಕಾರ್ಡ್ಸ್ ನೋಡಿದ್ದಾಗಿದೆ. ಅದರಲ್ಲಿ ಯಾವುದನ್ನೂ ಕಂಡುಹಿಡಿಯಲಿಕ್ಕಾಗಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದನ್ನೆಲ್ಲಾ ವಿಚಾರ ಮಾಡಿದ ಮೇಲೆ ಒಂದು ಕನ್‌ಕ್ಲೂಷನ್ ಏನು ಬಂದಿತು ಎಂದರೆ ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡಬೇಕು ಎನ್ನುವಂತಹ ವಿಚಾರಕ್ಕೆ ಬರಲಾಯಿತು. ಅದಕ್ಕೆ ಅವರೂ ಸಹ ಒಪ್ಪಿಕೊಂಡಿದ್ದಾರೆ.

ಉಪಾಧ್ಯಕ್ಷರು: ಅವರು ಅದಕ್ಕೆ ಒಪ್ಪಿಕೊಂಡಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಎಲ್ಲರೂ ಕೂಡಿಯೇ ಆ ನಿರ್ಣಯ ಮಾಡಿದ್ದೆ. ಅದಕ್ಕಾಗಿ ದಯಮಾಡಿ ಅದರ ಮೇಲೆ ಅವರು ಹೇಳಿಕೆ ಕೊಡಬೇಕು. ಇನ್ನು ಎರಡನೆಯದಾಗಿ ಸೇಡಂ ತಾಲ್ಲೂಕಿನಲ್ಲಿ ಸಬ್ ಇನ್‌ಸ್ಪೆಕ್ಟರ್ ಮಾಡಿರುವಂತಹ ಒಂದು ಕೊಲೆಯ ಬಗ್ಗೆ ಕೂಡ ಇವತ್ತು ಸಾಯಂಕಾಲ ಸ್ಟೇಟ್‌ಮೆಂಟ್ ಕೊಡಿಸುತ್ತೇವೆ ಎಂದಿರಿ. ಅದನ್ನೂ ಕೂಡ ಕೊಡಿಸಲಿಲ್ಲ. ಆದುದರಿಂದ ಆ ಎರಡು ವಿಚಾರಗಳ ಬಗ್ಗೆ ಸಚಿವರಿಂದ ಹೇಳಿಕೆ ಕೊಡಿಸಬೇಕು.

(9) ಸಚಿವರಿಂದ ಹೇಳಿಕೆ

ವಿಷಯ: ಕೊಪ್ಪಳದ ಗ್ರಾನೈಟ್ ಕ್ವಾರಿ ಬಗ್ಗೆ ಹಾಗೂ ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ದಲಿತ ಯುವಕನ ಸಾವಿನ ಬಗ್ಗೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಆ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆ. ನಿನ್ನೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿರುವಂತೆ ಕೊಪ್ಪಳ ತಾಲ್ಲೂಕಿನ ಪ್ರದೇಶದ ಗ್ರಾನೈಟ್ ಕ್ವಾರಿಯನ್ನು ಲೀಸ್‌ಗೆ ಕೊಡತಕ್ಕಂಥ ವಿಚಾರದಲ್ಲಿ ಸ್ವತಃ